ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಡಿಸೆಂಬರ್ 18, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 216 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ಉಪ್ಪಾರ ಸಮಾಜಕ್ಕೆ ಮೀಸಲಾತಿ ಕೊಡಿ

### ಶ್ರೀ ಭಗೀರಥ ಜನಕಲ್ಯಾಣ ರಥಯಾತ್ರೆಯಲ್ಲಿ ಶ್ರೀ ಪುರುಷೋತ್ತಮಾನಂದ ಪುರಿ ಸ್ವಾಮೀಜಿ



ದಾವಣಗೆರೆ, ಡಿ. 17 - ಉಪ್ಪಾರ ಸಮಾಜಕ್ಕೆ ಕುಲಶಾ ಸ್ತ್ರ ಅಧ್ಯಯನ ವರದಿ ಆಧರಿಸಿ ಸೂಕ್ತ ಮತ್ತು ನ್ಯಾಯೋಚಿತ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಬೇಕು ಎಂದು ಹೊಸದುರ್ಗ ಭಗೀರಥ ಪೀಠದ ಡಾ. ಪುರುಷೋತ್ತಮಾನಂದ ಪುರಿ ಸ್ವಾಮೀಜಿ ಸರ್ಕಾರವನ್ನು ಒತ್ತಾಯಿಸಿದರು.

ನಗರದ ಶ್ರೀ ಜಯದೇವ ಮುರುಘ ರಾಜೇಂದ್ರ ವೃತ್ತದಲ್ಲಿ ಇಂದು ಹಮ್ಮಿಕೊಂಡಿದ್ದ ಶ್ರೀ ಭಗೀರಥ ಭಾರತ ಜನಕಲ್ಯಾಣ ರಥಯಾತ್ರೆಯ ಬಹಿರಂಗ ಸಭೆಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಉಪ್ಪಾರ ಸಮಾಜಕ್ಕೆ ಮೀಸಲಾತಿ ಕಲ್ಪಿಸಬೇಕೆಂದು ಆಗ್ರಹಿಸಿ ನಡೆಸಿದ ಹೋರಾಟದ ಪರಿಣಾಮ ಸರ್ಕಾರ ಕುಲಶಾಸ್ತ್ರೀಯ ಅಧ್ಯಯನ ನಡೆಸುತ್ತಿದ್ದು, ಮೊದಲ ಹಂತದ ವರದಿ ಪಡೆದಿದೆ. ಡಿಸೆಂಬರ್ ಅಂತ್ಯದೊಳಗೆ ಅಂತಿಮ ವರದಿಯನ್ನು ಪಡೆದು, ಸಮಗ್ರವಾಗಿ ಚರ್ಚಿಸಿ, ಸೂಕ್ತ ಮೀಸಲಾತಿ ಕಲ್ಪಿಸಲು ಕೇಂದ್ರ ಶಿಫಾರಸ್ಸು ಮಾಡಬೇಕೆಂದು ಶ್ರೀಗಳು ಆಗ್ರಹಿಸಿದರು.

ಸತ್ಯಹರಿಶ್ಚಂದ್ರ, ಶ್ರೀರಾಮಚಂದ್ರ, ಸಗರ ಮತ್ತೆ ಕೆಲವು ಮಹಾಪುರುಷರು ಉಪ್ಪಾರ ಸಮಾಜದವರೇ ಆಗಿದ್ದಾರೆ. ಉಪ್ಪು ತಯಾರಿಸಿ, ಮಾರಾಟ ಮಾಡುವ ಮೂಲಕ ಸರ್ಕಾರಕ್ಕೆ ತೆರಿಗೆ ಕಟ್ಟುವಂತಹ ಶ್ರೀಮಂತರು ಸಮಾಜದಲ್ಲಿದ್ದರು ಎಂದು ಹೇಳಿದರು.

ಬ್ರಿಟಿಷರು ಗುಡಿ ಕೈಗಾರಿಕೆಗಳನ್ನು ನಾಶ ಪಡಿಸಿದ ಮೇಲೆ ಉಪ್ಪು ತಯಾರಿಕೆ ಸ್ಥಗಿತ ಗೊಂಡಿದೆ. ಪ್ರಸ್ತುತ ಉಪ್ಪಾರ ಸಮಾಜ ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದೆ ಎಂದರು.

ಉಪ್ಪಾರ ಸಮಾಜ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ (3ನೇ ಪುಟಕ್ಕೆ)

## 2023ರಲ್ಲಿ ಷೇರುಪೇಟೆಗೆ 1.5 ಲಕ್ಷ ಕೋಟಿ ರೂ.ಗಳ ಹೂಡಿಕೆ

ನವದೆಹಲಿ, ಡಿ. 17 – 2023ರಲ್ಲಿ ದೇಶದ ಷೇರು ಪೇಟೆಗೆ 1.5 ಲಕ್ಷ ಕೋಟಿ ರೂ.ಗಳ ವಿದೇಶಿ ಹೂಡಿಕೆ ಹರಿದು ಬಂದಿದೆ. ಇದೇ ಸಕಾರಾತ್ಮಕ ಬೆಳವಣಿಗೆ 2024ರಲ್ಲೂ ಮುಂದುವರೆಯಲಿದೆ ಎಂದು ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

2022ರಲ್ಲಿ ಭಾರತದ ಷೇರು ಪೇಟೆಯಿಂದ 1.21 ಲಕ್ಷ ಕೋಟಿ ರೂ. ಹೂಡಿಕೆ ಹೊರ ಹೋಗಿತ್ತು. ವಿಶ್ವದ ಹಲವು ಕೇಂದ್ರ ಬ್ಯಾಂಕ್‌ಗಳು ಬಡ್ಡಿ ದರ ಏರಿಕೆ ಮಾಡಿದ್ದು ಷೇರು ಪೇಟೆಗಳ ಮೇಲೆ ವಿಶ್ವಾಸ ಕುಸಿಯಲು ಕಾರಣ ವಾಗಿತ್ತು. ಅಲ್ಲದೇ, ಲೋಕಸಭಾ ಚುನಾವಣೆಗಳು ಸಮೀಪಿಸುತ್ತಿರು ವಂತೆಯೇ ರಾಜಕೀಯ ಸ್ಥಿರತೆ ಹಾಗೂ ಆರ್ಥಿಕ ಪ್ರಗತಿ ಹೂಡಿಕೆದಾರರಿಗೆ ಪ್ರಮುಖ ವಿಷಯಗಳಾಗಿದ್ದವು.

ಜಾಗತಿಕವಾಗಿ ಹಣದುಬ್ಬರ ಏರಿಕೆ ಹಾಗೂ ಬಡ್ಡಿ (3ನೇ ಪುಟಕ್ಕೆ)

## ರಷ್ಯಾ - ಉಕ್ರೇನ್ ನಡುವೆ ತೀವ್ರಗೊಂಡ ಡ್ರೋನ್ ಸಮರ



ಕೀವ್, ಡಿ. 17 – ರಷ್ಯಾ ಹಾಗೂ ಉಕ್ರೇನ್‌ಗಳು ಸತತ ಎರಡನೇ ದಿನ ಹತ್ತಾರು ಡ್ರೋನ್‌ಗಳನ್ನು ಬಳಸಿ ದಾಳಿ ನಡೆಸಿವೆ. ರಷ್ಯಾದ ಸೈನ್ಯದ ವಿಮಾನ ನೆಲೆ ಗುರಿಯಾಗಿಟ್ಟುಕೊಂಡು ಉಕ್ರೇನ್ ದಾಳಿ ನಡೆಸಿತ್ತು.

ರಷ್ಯಾ ನೆಲೆಗಳನ್ನು ಗುರಿಯಾಗಿಟ್ಟು ಕೊಂಡು ಉಕ್ರೇನ್ 35 ಡ್ರೋನ್ ದಾಳಿ ನಡೆಸಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ತಿಳಿಸಿದೆ.

ರಷ್ಯಾದ ಪಡೆಗಳು ಉಕ್ರೇನ್‌ನ ದಕ್ಷಿಣ ಹಾಗೂ ಪೂರ್ವ ಭಾಗಕ್ಕೆ ಕಳಿಸಿದ 20 ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ಉಕ್ರೇನ್ ವಾಯುಪಡೆ ತಿಳಿಸಿದೆ.

ಉಕ್ರೇನ್‌ನ ಬಂದರು ನಗರವಾದ ಒಡೆಸಾದಲ್ಲಿ ಡ್ರೋನ್ ಅವಶೇಷಗಳು ಮನೆಯ ಮೇಲೆ ಬಿದ್ದು ಒಬ್ಬ ನಾಗರಿಕ ಸಾವನ್ನಪ್ಪಿರುವುದಾಗಿ ಉಕ್ರೇನ್ ಸೈನ್ಯ ತಿಳಿಸಿದೆ. ಉಕ್ರೇನ್ ಹಾಗೂ ರಷ್ಯಾ ಸಮರ ಆರಂಭವಾಗಿ ಎರಡು ವರ್ಷಗಳು ಉರುಳಿವೆ.

ಯುದ್ಧ ಯಥಾಸ್ಥಿತಿಯಲ್ಲಿಲ್ಲ ಎಂಬುದನ್ನು ಸಾಬೀತು ಪಡಿಸಲು ಉಭಯ ದೇಶಗಳು ಡ್ರೋನ್ ದಾಳಿ ತೀವ್ರಗೊಳಿಸುತ್ತಿವೆ. ಇತ್ತೀಚಿನ ತಿಂಗಳುಗಳಲ್ಲಿ ಯಾವುದೇ ದೇಶ ಯುದ್ಧದಲ್ಲಿ ಮುನ್ನಡೆ ಸಾಧಿಸಲು ಸಾಧ್ಯವಾಗಿಲ್ಲ.

## ಇಂದು ದೂರಸಂಪರ್ಕ ಮಸೂದೆ ಮಂಡನೆ ಸಾಧ್ಯತೆ

ನವದೆಹಲಿ, ಡಿ. 17 – ಕೇಂದ್ರ ಸರ್ಕಾರ ಸೋಮವಾರ ಲೋಕಸಭೆಯಲ್ಲಿ ದೂರಸಂಪರ್ಕ ಮಸೂದೆಯನ್ನು ಮಂಡಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ದೂರಸಂಪರ್ಕ ಮಸೂದೆ 2023ರ ಮೂಲಕ 138 ವರ್ಷಗಳ ಹಳೆಯ ಇಂಡಿಯನ್ ಟೆಲಿಗ್ರಾಫ್ ಕಾಯ್ದೆ ಬದಲಿಸಲು ಉದ್ದೇಶಿಸಲಾಗಿದೆ. ಕಳೆದ ಆಗಸ್ಟ್ ತಿಂಗಳಲ್ಲಿ ಕೇಂದ್ರ ಸಂಪುಟ ಈ ಮಸೂದೆಗೆ ಒಪ್ಪಿಗೆ ನೀಡಿತ್ತು.

ಈ ಮಸೂದೆಯ ಮೂಲಕ ಟೆಲಿಕಾಂ ನಿಯಂತ್ರಕ ಟ್ರಾಯ್ ಅಧಿಕಾರ ಕಡಿತಗೊಳಿಸಲು ಉದ್ದೇಶಿಸಲಾಗಿದೆ. ಉದ್ಯಮದ ಹಲವಾರು ಸಂಸ್ಥೆಗಳು ಟ್ರಾಯ್ ಪ್ರಾಬಲ್ಯವನ್ನು ವಿರೋಧಿಸುತ್ತಿವೆ. (3ನೇ ಪುಟಕ್ಕೆ)

## ಗಣೇಶ ಮೂರ್ತಿ ಪೂಜೆ ವಿಷಯ ಅನಗತ್ಯ ಸಂವಿಧಾನದಲ್ಲೇ ಧಾರ್ಮಿಕ ಸ್ವಾತಂತ್ರ್ಯವಿದೆ



ಮಾಯಕೊಂಡ, ಡಿ. 17 - ಜೀವನ ಹಾಳು ಮಾಡುವ ಮದ್ಯದಂಗಡಿಗೆ ಹೋಗುವ ಬದಲು, ಗುಡಿಗೆ ಹೋಗಿ ದೇವರ ಆರಾಧಿಸುವುದು ಅಭ್ಯಾಸ ಮಾಡಿಕೊಂಡು ನೆಮ್ಮದಿ ಕಂಡುಕೊಳ್ಳಬೇಕು. ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಕರೆ ನೀಡಿದರು.

ಇಲ್ಲಿಗೆ ಸಮೀಪದ ಬಾವಿಹಾಳು ಗ್ರಾಮದಲ್ಲಿ ಇಂದು ಏರ್ಪಾಡಾಗಿದ್ದ ಕರಿಯಮ್ಮ ದೇವಿ ದೇವಸ್ಥಾನ ಉದ್ಘಾಟನೆ ಹಾಗು ಕಳಸಾರೋಹಣ ಕಾರ್ಯಕ್ರಮದಲ್ಲಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಬಸವಾದಿ ಶರಣರು ದೇಹವನ್ನೇ ಪವಿತ್ರವಾದ ಗುಡಿಯನ್ನಾಗಿಸಿಕೊಳ್ಳಬೇಕು ಎಂದಿದ್ದಾರೆಯೇ ವಿನಾಃ ಗುಡಿ ಸಂಸ್ಕೃತಿ ವಿರೋಧಿಸಿಲ್ಲ, ಎಂದರು.

ಗಣೇಶ ಪ್ರತಿಷ್ಠಾಪನೆ, ಪೂಜೆ ವಿಷಯ ಅನಗತ್ಯ ಸದ್ದು ಮಾಡುತ್ತಿದೆ. ಕೆಲವರು ಗಣೇಶ ಪೂಜೆ ನಮ್ಮ ಸಂಪ್ರದಾಯವಲ್ಲ ಎಂದು ಜನರಲ್ಲಿ ಗೊಂದಲವುಂಟುಮಾಡು ತ್ತಿರುವುದು ಅಸಮಂಜಸ. ತಮ್ಮಿಚ್ಛೆಯಂತೆ ಧಾರ್ಮಿಕ ಅನುಸರಣೆ ನಮ್ಮ ಸಂವಿಧಾನ ದಲ್ಲಿಯೇ ಧಾರ್ಮಿಕ ಸ್ವಾತಂತ್ರ್ಯ ನೀಡಿದೆ. ದೇವರ ಪೂಜಿಸುವ ನಂಬಿಕೆಗೆ ಅವರಿಗೇ ಸೇರಿದ್ದು, ಎಂದು ಪ್ರತಿಪಾದಿಸಿದರು.

ರಾಜ್ಯದ ನೀರಾವರಿ ಯೋಜನೆಗಳು ಹೆಚ್ಚು ಹೆಚ್ಚು ರೈತರಿಗೆ ತಲುಪಬೇಕಿದೆ. ಭರಮಸಾಗರ ಹಾಗು ಜಗಳೂರು ಭಾಗದ ಕೆರೆಗಳಿಗೆ ನೀರಾವರಿ ಆಗದಿದ್ದರೆ ಆ ಭಾಗದ ರೈತರು ಈ ವರ್ಷ ಉಂಟಾಗಿರುವ ಬರದಲ್ಲಿ ಉಳಿಯುತ್ತಿರಲಿಲ್ಲ. ಈಗಾಗಲೇ ಆವರಿಸಿರುವ ಬರಕ್ಕೆ, ರೈತರ ಪಾಡಂತೂ ಹೇಳತೀರದಾಗುತ್ತಿತ್ತು. ನೀರಾವರಿ ಯೋಜನೆಗಳ ಯಶಸ್ಸಿಗೆ, ಎಲ್ಲ ಸರ್ಕಾರಗಳ ಸಹಕಾರ ಇದೆ. ಸಂಸದ ಸಿದ್ದೇಶ್ವರ ಕೂಡಾ ಸಹಕಾರ ನೀಡಿದ್ದಾರೆ. ಇನ್ನು ಹೆಚ್ಚು ಕೆರೆಗಳಿಗೆ ನೀರು ತುಂಬಿಸುವ ಕೆಲಸ ಆಗಬೇಕಿದೆ, ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಕೆ.ಎಸ್. ಬಸವಂತಪ್ಪ, ಮಾಜಿ ಶಾಸಕ (2ನೇ ಪುಟಕ್ಕೆ)

## ಹದಗೆಟ್ಟ ಬಾವಿಹಾಳ್-ಸಿರಿಗೆರೆ ರಸ್ತೆ, ತರಳಬಾಳು ಜಗದ್ಗುರುಗಳ ಕೋಪ

### 3 ತಿಂಗಳಲ್ಲಿ ದುರಸ್ತಿಗೆ ತಾಕೀತು

ಸಿರಿಗೆರೆ-ಬಾವಿಹಾಳ್ ರಸ್ತೆ ದುರಾವಸ್ಥೆಗೆ ತರಳಬಾಳು ಜಗದ್ಗುರುಗಳು ಮಾಜಿ ಶಾಸಕರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿ, ಕೂಡಲೇ ಸರಿಪಡಿಸಲು ಹಾಲಿ ಶಾಸಕರಿಗೆ ತಾಕೀತು ಮಾಡಿ ಬಿಸಿ ಮುಟ್ಟಿಸಿದರು.

ಸಿರಿಗೆರೆಯಿಂದ ಬಾವಿಹಾಳು ಬರುವ ರಸ್ತೆ ತೀರಾ ಹದಗೆಟ್ಟಿದೆ. ಪ್ರೊ. ಲಿಂಗಣ್ಣ ಐದು ವರ್ಷ ಶಾಸಕರಾಗಿದ್ದಾಗಲೂ ರಸ್ತೆ ನಿರ್ಮಾಣ ವಾಗದಿರುವುದು ನಾಚಿಕೆಗೇಡು. 1.85 ಕೋಟಿ ರೂ. (2ನೇ ಪುಟಕ್ಕೆ)






ಶಿವ ಶಿವ

ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರ ದೇವಸ್ಥಾನ ಕಾರ್ತಿಕ ಸಮಿತಿ
ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದ ಆವರಣ, ತರಳಬಾಳು ವೃತ್ತ, ದಾವಣಗೆರೆ.
ಶ್ರೀ ಶಿವಕುಮಾರ ಸ್ವಾಮಿ ಮಹಾಮಂಟಪ, ತರಳಬಾಳು ಬಡಾವಣೆ, ದಾವಣಗೆರೆ.

16ನೇ ವರ್ಷದ ಕಾರ್ತಿಕೋತ್ಸವದ ಪ್ರಯುಕ್ತ ಸಹಸ್ರ ದೀಪೋತ್ಸವ

ದಿವ್ಯ ಸಾನ್ನಿಧ್ಯ : ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು
ಶ್ರೀ ಶ್ರೀ ಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ.
ಅಧ್ಯಕ್ಷತೆ : ಶರಣ ರಾಮಗೊಂಡನಹಳ್ಳಿ ಜಯಣ್ಣ, ಅಧ್ಯಕ್ಷರು, ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರ ದೇವಸ್ಥಾನ ಕಾರ್ತಿಕ ಸಮಿತಿ.
ಮುಖ್ಯ ಅತಿಥಿಗಳು : ಡಾ. ಪ್ರಭಾ ಮಲ್ಲಿಕಾರ್ಜುನ್, ಲೈಫ್ ಟ್ರಸ್ಟಿ, ಎಸ್.ಎಸ್. ಕೇರ್ ಟ್ರಸ್ಟ್ ಹಾಗೂ ಆಡಳಿತ ಮಂಡಳಿ ಸದಸ್ಯರು, ಬಾಪೂಜಿ ವಿದ್ಯಾಸಂಸ್ಥೆ.
ಶರಣ ಎಂ.ಬಿ. ಸಂಗಮೇಶ್ವರಗೌಡ್ರು, ಕಾರ್ಯದರ್ಶಿಗಳು, ಸಾಧು ಸದ್ಧರ್ಮ ವೀರಶೈವ ಸಂಘ, ದಾವಣಗೆರೆ.
ಶರಣ ಬಿ. ವಾಮದೇವಪ್ಪ, ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ದಾವಣಗೆರೆ.

ದಿ. 18-12-2023ರ ಸೋಮವಾರ ಸಂಜೆ 7 ಕ್ಕೆ ಪರಮಪೂಜ್ಯ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು, ತರಳಬಾಳು ಬಡಾವಣೆಯ ಶ್ರೀ ಶಿವಕುಮಾರ ಸ್ವಾಮಿ ಮಹಾಮಂಟಪದಲ್ಲಿರುವ ಶ್ರೀ ಮರುಳಸಿದ್ದೇಶ್ವರ ದೇವಸ್ಥಾನದಲ್ಲಿ ದೀಪೋತ್ಸವವನ್ನು ಉದ್ಘಾಟಿಸಿ, ನಂತರ 7.30 ಕ್ಕೆ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದ ಆವರಣದಲ್ಲಿರುವ ಶ್ರೀ ಮರುಳಸಿದ್ದೇಶ್ವರ ದೇವಸ್ಥಾನದಲ್ಲಿ ದೀಪ ಬೆಳಗಿಸಿ, ಕಾರ್ತಿಕೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ನಂತರ ಕಲ್ಯಾಣ ಮಂಟಪದಲ್ಲಿ ನಡೆಯುವ ಸಮಾರಂಭದಲ್ಲಿ ಪರಮಪೂಜ್ಯ ಶ್ರೀಗಳು ಆಶೀರ್ವಚನ ದಯಪಾಲಿಸಲಿದ್ದಾರೆ. ಸದ್ಭಕ್ತರೆಲ್ಲರೂ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಿ ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರ ದೇವಸ್ಥಾನ ಕಾರ್ತಿಕೋತ್ಸವ ಸಮಿತಿಯವರು ಕೋರಿದ್ದಾರೆ.

ಸದ್ಭಕ್ತರೆಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿರುತ್ತದೆ.

ಭಕ್ತರ ಆಗಮನದ ನಿರೀಕ್ಷೆಯಲ್ಲಿ : ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರ ದೇವಸ್ಥಾನ ಕಾರ್ತಿಕೋತ್ಸವ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರ ದೇವಸ್ಥಾನ, ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪ ಆವರಣ, ತರಳಬಾಳು ವೃತ್ತ, ದಾವಣಗೆರೆ. ಹಾಗೂ ಶಿವಕುಮಾರಸ್ವಾಮಿ ಮಹಾಮಂಟಪ ಕಾರ್ತಿಕೋತ್ಸವ ಸಮಿತಿ, ತರಳಬಾಳು ಬಡಾವಣೆ, ವಿದ್ಯಾನಗರ ಮತ್ತು ನಗರದ ಸರ್ವ ಸದ್ಭಕ್ತರು, ದಾವಣಗೆರೆ.


ಸಾಂಸ್ಕೃತಿಕ ವೈಭವದಲ್ಲಿ ಭಾಗವಹಿಸುವ ಕಲಾ ತಂಡಗಳು :
• ಶ್ರೀ ತರಳಬಾಳು ಪ್ರೌಢಶಾಲೆ ಮಕ್ಕಳು ಅನುಭವ ಮಂಟಪ, ದಾವಣಗೆರೆ.
• ಶ್ರೀ ಮಾಗನೂರು ಬಸಪ್ಪ ಪ್ರೌಢಶಾಲೆ ಮಕ್ಕಳು, ದಾವಣಗೆರೆ • ತುಳಸಿ ಮಹಿಳಾ ಕಲಾ ಸಂಘ, ಸಿದ್ದವೀರಪ್ಪ ಬಡಾವಣೆ.
• ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ ಮತ್ತು ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಪ್ರೌಢಶಾಲೆ, ಎಲೆಬೇತೂರು.

ವಿಶೇಷ ಸೂಚನೆ : ದಿನಾಂಕ 18-12-2023ರ ಸೋಮವಾರ ಬೆಳಿಗ್ಗೆ 6 ಗಂಟೆಗೆ ಶ್ರೀ ಮರುಳಸಿದ್ದೇಶ್ವರ ದೇವರ ರುದ್ರಾಭಿಷೇಕ ಮಾಡಲಾಗುತ್ತದೆ. ಸದ್ಭಕ್ತರೆಲ್ಲರೂ ಈ ಪೂಜಾ ಕಾರ್ಯದಲ್ಲಿ ಭಾಗವಹಿಸಲು ಕೋರಿದೆ.


## ವಲಸಿಗರ ದೋಣಿ ಮುಳುಗಿ 61 ಸಾವು

ಕೈರೊ, ಡಿ. 17 – ಯುರೋಪಿಗೆ ಡಜನ್‌ಗಟ್ಟಲೆ ವಲಸಿಗರನ್ನು ಕರೆದುಕೊಂಡು ಹೋಗುತ್ತಿದ್ದ ದೋಣಿಯೊಂದು ಲಿಬ್ಯಾ ತೀರದಲ್ಲಿ ಮುಳುಗಿದ್ದು, 60ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ. ಮೃತರಲ್ಲಿ (3ನೇ ಪುಟಕ್ಕೆ)

## ಅಕ್ರಮ ವಲಸೆಯೇ ಶತ್ರುಗಳ ಅಸ್ತ್ರ : ಸುನಕ್ ಕಳವಳ



ಲಂಡನ್, ಡಿ. 17 – ಅಕ್ರಮ ವಲಸೆಯನ್ನು ದಾಳಿಯ ಅಸ್ತ್ರವಾಗಿ ಬಳಸಿಕೊಳ್ಳಬಹುದು. ಇದರಿಂದ ಯುರೋಪಿನ ಮೇಲಿನ ಒತ್ತಡ ಹೆಚ್ಚಾಗಲಿದೆ. ಈ ಪಿಡುಗು ನಿವಾರಿಸಲು ಅಂತರರಾಷ್ಟ್ರೀಯ ಕಾನೂನಿನಲ್ಲಿ ಬದಲಾವಣೆ ತರಬೇಕಿದೆ ಎಂದು ಬ್ರಿಟನ್ ಪ್ರಧಾನ ಮಂತ್ರಿ ರಿಶಿ ಸುನಕ್ ಹೇಳಿದ್ದಾರೆ.

ಇಟಲಿಯ ರೋಮ್‌ನಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಶತ್ರುಗಳು ವಲಸೆಯನ್ನು ಅಸ್ತ್ರವಾಗಿ ಬಳಸಿಕೊಳ್ಳಬಹುದು. ಅವರು ಉದ್ದೇಶಪೂರ್ವಕವಾಗಿ ಜನರನ್ನು ನಮ್ಮ ಕಡೆ ಕಳಿಸಿ ಯುರೋಪ್ ಸಮಾಜವನ್ನು ಅಸ್ಥಿರಗೊಳಿಸಬಹುದು ಎಂದು ಎಚ್ಚರಿಸಿದರು.

ಇಟಲಿಯ ಪ್ರಧಾನ ಮಂತ್ರಿ ಜಿಯಾರ್ಜಿಯಾ ಮೆಲೊನಿ ಆಯೋಜಿಸಿದ್ದ ಅಟ್ರೆಜು ರಾಜಕೀಯ ಉತ್ಸವದಲ್ಲಿ ಅವರು ಮಾತನಾಡಿದರು.

ಅಕ್ರಮ ವಲಸಿಗರ ಸಮಸ್ಯೆ ಹೆಚ್ಚಾಗುತ್ತಲೇ ಸಾಗಿದೆ. ಇದಕ್ಕೆ ನಾವು ಪರಿಹಾರ ಕಂಡುಕೊಳ್ಳಬೇಕಿದೆ ಎಂದು ಸುನಕ್ (3ನೇ ಪುಟಕ್ಕೆ)

## ಶಾಲೆಯಲ್ಲಿ ವಿದ್ಯಾರ್ಥಿನಿಯ ಬೆತ್ತಲೆ ವಿಡಿಯೋ ಚಿತ್ರೀಕರಣದ ಆರೋಪ

ಕೋಲಾರ, ಡಿ. 17 - ಜಿಲ್ಲೆಯ ಮಾಲೂರು ತಾಲ್ಲೂಕಿನ ಯಲುವಳ್ಳಿ ಬಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿನಿಯ ಬೆತ್ತಲೆ ವಿಡಿಯೋ ಚಿತ್ರೀಕರಣ ಮಾಡಲಾಗಿದೆ ಎಂಬ ಆರೋಪ ಕೇಳಿ ಬಂದಿದೆ.

ಶಾಲೆಗೆ ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕ ನವೀನ್ ರಾಜ್ ಭೇಟಿ ನೀಡಿದ್ದು, ಶಾಲೆಯ ಸಿಬ್ಬಂದಿ, ಪೋಷಕರು, ಮಕ್ಕಳಿಂದ ಮಾಹಿತಿ ಸಂಗ್ರಹಿಸಿದ್ದಾರೆ.

ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿನಿಯ ಖಾಸಗಿ ವಿಡಿಯೋ ವಿಚಾರ ನನ್ನ ಗಮನಕ್ಕೆ ಬಂದಿದೆ. ಕೂಡಲೇ ಇದರ ಹಿಂದೆ (3ನೇ ಪುಟಕ್ಕೆ)

## ಕೆ. ನಾಗಕುಮಾರಸ್ವಾಮಿ, ವಕೀಲರು ನಿಧನ



ದಾವಣಗೆರೆ ಶಿವಕುಮಾರ ಸ್ವಾಮಿ ಬಡಾವಣೆ, 1ನೇ ಮೇನ್, 1ನೇ ಕ್ರಾಸ್, ಡೋರ್ ನಂ. 571/2ರ ವಾಸಿ, ಹಿರಿಯ ವಕೀಲರಾದ

**ಶ್ರೀ ಕೆ. ನಾಗಕುಮಾರಸ್ವಾಮಿ (KNS)** ಅವರು

ದಿನಾಂಕ 17-12-2023ರ ಭಾನುವಾರ ರಾತ್ರಿ 8 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 69 ವರ್ಷ ವಯಸ್ಸಾಗಿತ್ತು.

ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18-12-2023ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಮೃತರ ಸ್ವಗ್ರಾಮವಾದ ಹರಪನಹಳ್ಳಿ ತಾಲ್ಲೂಕು ಕುರೆಮಾಗಾನಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಮೊ. : 98802 07167


## ಒಂಭತ್ತನೇ ವರ್ಷದ ಪುಣ್ಯಸ್ಮರಣೆ



ದಿ|| ಲಕ್ಷ್ಮಣ್‌ರಾವ್ ಪವಾರ್

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ
ಶ್ರೀಮತಿ ಮಂಜುಳಾಬಾಯಿ ದಿ|| ಶ್ರೀ ಅಜ್ಜಪ್ಪ ಪವಾರ್
ಶ್ರೀಮತಿ ನಾಗಮ್ಮಬಾಯಿ ದಿ|| ಶ್ರೀ ರಾಮಪ್ಪ ಪವಾರ್ ಮತ್ತು ಮಕ್ಕಳು
ಕುಮಾರಿ ನಳಿನ, Software Engineer U.K.
ಶ್ರೀಮತಿ ಅಂಬಿಕ ಶ್ರೀ ಮಾಲತೇಶ ಪವಾರ್, ಗಣೇಶ ಟ್ರಾನ್ಸ್‌ಪೋರ್ಟ್, ಚಿತ್ರದುರ್ಗ
ಶ್ರೀಮತಿ ರೂಪ ಶ್ರೀ ಸತೀಶ್ ಪವಾರ್, ಶ್ರೀ ಗಣೇಶ್ ಸ್ಟೀಲ್ಸ್ ಅಂಡ್ ಸಿಮೆಂಟ್
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...
ಪತ್ನಿ : ಸುಮಿತ್ರಬಾಯಿ ಲಕ್ಷ್ಮಣ್ ಪವಾರ್,
ಮಗಳು : ಶ್ರೀಮತಿ ನಂದಿನಿ ಶ್ರೀ ಕೋಟೇಶ್
ಮಗ- ಸೊಸೆ : ಶ್ರೀಮತಿ ಸಹನಾ ಶ್ರೀ ಮಧು ಪವಾರ್, ಅಧ್ಯಕ್ಷರು, 17ನೇ ವಾರ್ಡ್ ಕಾಂಗ್ರೆಸ್ ಸಮಿತಿ
ಅಮೋಘ, ಪ್ರತೀಕ್, ಪ್ರಣವ್, ಸಾನಿಕ, ಸಮನ್ವಿ ಪವಾರ್
ಹಾಗೂ ಬಂಧು-ಮಿತ್ರರು

# ವೀರಶೈವ ಲಿಂಗಾಯತ ಸಮಾಜದ ಮಹಾ ಅಧಿವೇಶನದ ಯಶಸ್ವಿಗೆ ಪಂಚಮಸಾಲಿ ಶ್ರೀ ಕರೆ



ಹರಿಹರ, ಡಿ.17- ದಾವಣಗೆರೆಯಲ್ಲಿ ಇದೇ ದಿನಾಂಕ 23, 24 ರಂದು ನಡೆಯುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಅಧಿವೇಶನದಲ್ಲಿ ಸಮಸ್ತ ಪಂಚಮಸಾಲಿ ಸಮಾಜದವರು ಹಾಗೂ ಲಿಂಗಾಯತ ಸಮಾಜದ ಎಲ್ಲಾ ಒಳಪಂಗಡಗಳ ಸಮಾಜದವರು 'ನಾವೆಲ್ಲರೂ ಒಂದೇ' ಎಂಬ ಭಾವದಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಅಧಿವೇಶನವನ್ನು ಯಶಸ್ವಿಯಾಗಿಸುವಂತೆ ಪಂಚಮಸಾಲಿ ಗುರುಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿ ಕರೆ ನೀಡಿದ್ದಾರೆ.

ನಗರದ ಹೊರವಲಯದ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಶ್ರೀಗಳು ಮಾತನಾಡಿದರು.

ಈ ಅಧಿವೇಶನವು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದು, ಧಾರ್ಮಿಕ, ಶೈಕ್ಷಣಿಕ, ಅಧ್ಯಾತ್ಮಿಕ, ಸಾಹಿತ್ಯಿಕ ಸೇರಿದಂತೆ ಅನೇಕ ಗೋಷ್ಠಿಗಳು, ಹಲವಾರು ಚಿಂತನ-ಮಂಥನ ಏರ್ಪಾಡಾಗಿವೆ. ನಾಡಿನ ಎಲ್ಲಾ ವೀರಶೈವ ಲಿಂಗಾಯತ ಮಠಾಧೀಶರು, ವಿವಿಧ ಪೀಠದ ಜಗದ್ಗುರುಗಳು, ನಾವೆಲ್ಲರೂ ಒಂದಾಗಬೇಕು, ಮನಸ್ಸುಗಳು ಒಂದಾಗಬೇಕು. ಆ ಮೂಲಕ ನಾವು ಮೇಲು-ಕೀಳು ಎಂಬ ಭಾವನೆ ಬಿಟ್ಟು ನಾವೆಲ್ಲರೂ ಒಂದು ಎಂಬ ಭಾವ ಬರಬೇಕು ಎಂದು, ಒಂದು ಸೇತುವೆಯ ರೂಪದಲ್ಲಿ ವೀರಶೈವ ಮಹಾಸಭಾ ಕಾರ್ಯವನ್ನು ಮಾಡುತ್ತಾ ಸಾಗಿದೆ. ಅದಕ್ಕೆ ನಾವು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತೇವೆ ಎಂದು ಹೇಳಿದರು.

ನಾಡಿನಾದ್ಯಂತ ಇರುವ ಪಂಚಮಸಾಲಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಜೊತೆಗೆ ಎಲ್ಲಾ ಒಳಪಂಗಡಗಳು, ನಾವೆಲ್ಲರೂ ಒಂದೇ ಎಂಬ ಭಾವದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು. ಸಮಾಜ ಎಂದು ಬಂದಾಗ ಅಖಂಡ ವೀರಶೈವ ಲಿಂಗಾಯತರು ಒಂದೇ ಎಂಬ ಭಾವದ ಅಡಿಯಲ್ಲಿ ಹೋದರೆ ಸಮುದಾಯಕ್ಕೆ ಮತ್ತು ಮುಂದೆ ಬರುವ ಮಕ್ಕಳಿಗೆ ನಾವೆಲ್ಲರೂ ಮಾರ್ಗದರ್ಶನ ಮಾಡುವ ಸಾಮರ್ಥ್ಯ ಬರುತ್ತದೆ ಎಂದು ಶ್ರೀಗಳು ಪ್ರತಿಪಾದಿಸಿದರು.

ಪಂಚಮಸಾಲಿ ಗುರುಪೀಠದ ಆಡಳಿತ ಅಧಿಕಾರಿ ಡಾ. ರಾಜಕುಮಾರ್ ಮಾತನಾಡಿ, ಲಿಂಗಾಯತ ಧರ್ಮವನ್ನು ಕಟ್ಟುವಲ್ಲಿ ಅನೇಕರು ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ. ಭೀಮಣ್ಣ ಖಂಡ್ರೆ ಅವರು ಸಮಾಜದ ಒಳಿತಿಗಾಗಿ ದೊಡ್ಡ ಮಟ್ಟದಲ್ಲಿ ಆಂದೋಲನವನ್ನು ಮಾಡಿದ್ದಾರೆ. ಒಕ್ಕೂಟ ವ್ಯವಸ್ಥೆಯ ಎಲ್ಲಾ ಒಳಪಂಗಡಗಳಲ್ಲಿ ಪಂಚಮಸಾಲಿ ಸಮುದಾಯ ತಾಯಿ ಸ್ಥಾನವನ್ನು ಪಡೆದಿದೆ ಎಂದರು.

ಜಾತಿ ಗಣತಿ, ವಿಚಾರದಲ್ಲಿ ಪಂಚಮಸಾಲಿ ಸಮುದಾಯಕ್ಕೆ ಬಹಳ ದೊಡ್ಡ ಮಟ್ಟದಲ್ಲಿ ತಾರತಮ್ಯ ನಡೆಯುತ್ತಿದೆ. ಜೊತೆಗೆ ಹಿಂದುಳಿದ ಆಯೋಗ ಕೊಟ್ಟಿರುವ ವರದಿ ವೈಜ್ಞಾನಿಕವಾಗಿ ಆಗಿಲ್ಲ, ಸರ್ಕಾರ ಇದನ್ನು ಒಪ್ಪದೇ ಕಾನೂನಾತ್ಮಕವಾಗಿ ಮಾಡಬೇಕು ಎಂದು ಅವರು ಹೇಳಿದರು.

ಧರ್ಮದರ್ಶಿ ಬಿ.ಸಿ. ಉಮಾಪತಿ ಮಾತನಾಡಿದರು. ಈ ಸಂದರ್ಭದಲ್ಲಿ ಪಂಚಮಸಾಲಿ ಗುರುಪೀಠದ ಧರ್ಮದರ್ಶಿ ಚಂದ್ರಶೇಖರ್ ಪೂಜಾರ್, ದೊಡ್ಡಪ್ಪ, ಬಾದಾಮಿ ಜಯಣ್ಣ, ಉಚ್ಚಂಗಿದುರ್ಗ ಬಸವರಾಜ್, ಕರಿಬಸಪ್ಪ ಗುತ್ತೂರು, ಪುರುವಂತರ ಮಂಜುನಾಥ್, ಬೆಂಡಿಗೇರಿ ಅಶೋಕ, ಶಿವಪ್ಪ ಇತರರು ಹಾಜರಿದ್ದರು.

## ಭಕ್ತರಿಗೆ ಅನ್ನ ದಾಸೋಹ, ವಸತಿ ವ್ಯವಸ್ಥೆ

ಮಹಾ ಅಧಿವೇಶನದಲ್ಲಿ ಪಾಲ್ಗೊಳುವ ಪಂಚಮಸಾಲಿ ಸೇರಿದಂತೆ, ಎಲ್ಲಾ ಒಳಪಂಗಡಗಳ ಭಕ್ತರಿಗೆ ಮಠದ ಆವರಣದಲ್ಲಿ ಎರಡು ದಿನ ಅನ್ನದಾಸೋಹ ಮತ್ತು ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಪಂಚಮಸಾಲಿ ಗುರುಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿ ತಿಳಿಸಿದ್ದಾರೆ.

ಮಹಾ ಅಧಿವೇಶನದ ಉದ್ಘಾಟನಾ ಸಮಾರಂಭದಲ್ಲಿ ಲಿಂಗಾಯತ ಸಮಾಜದ ಎಲ್ಲಾ ಒಳಪಂಗಡಗಳನ್ನು ಕೇಂದ್ರದ ಓಬಿಸಿ ಪಟ್ಟಿಗೆ ಸೇರಿಸುವಂತೆ ಮಾತನಾಡಲಾಗುತ್ತದೆ ಎಂದರು.

ಪಂಚಮಸಾಲಿ ಸಮಾಜದ 2 ಎ ಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ, ಮಹಾ ಅಧಿವೇಶನದಲ್ಲಿ ವಿಷಯ ಪ್ರಸ್ತಾಪ ಮಾಡುತ್ತೀರಾ? ಎಂಬ ಮಾತಿಗೆ ಪಂಚಮಸಾಲಿ 2 ಎ ಮೀಸಲಾತಿ ವಿಚಾರಗಳು ನ್ಯಾಯಾಲಯದ ಮೆಟ್ಟಿಲು ಏರಿದ್ದು, ಅದಕ್ಕಾಗಿ ನ್ಯಾಯಾಲಯದಲ್ಲಿ ಕಾನೂನಾತ್ಮಕ ಹೋರಾಟ ಮಾಡಿದರೆ ಮಾತ್ರ ನ್ಯಾಯ ಸಿಗುತ್ತದೆ. ಸರ್ಕಾರ ಅದನ್ನು ಮುಚ್ಚಳಿಕೆಯಲ್ಲಿ ಬರೆದು ಕೊಟ್ಟಿದೆ.

ಸಿ.ಎಂ. ಕಾರ್ಯದರ್ಶಿಗಳ ಜೊತೆಗೆ ನಾನು ಚರ್ಚೆ ಕೂಡ ಮಾಡಿರುವೆ. ಹಿಂದೆ ಹೋರಾಟಕ್ಕೆ ಫಲವಾಗಿ ಸರ್ಕಾರ 2 ಸಿ 2 ಡಿ ಕೊಟ್ಟು ಬರೀ ಘೋಷಣೆ ಮಾಡಿತ್ತು. ಆದರೆ ಪಕ್ರಿಯೆಗಳು ಆಗಲಿಲ್ಲ. ಹಾಗಾಗಿ ಕಾನೂನಾತ್ಮಕ ಹೋರಾಟ ಅನಿವಾರ್ಯ. ಈಗ ಅದಕ್ಕಾಗಿ ವಕೀಲರು ಇದ್ದಾರೆ. ಅವರು ಅದನ್ನು ನೋಡಿಕೊಳ್ಳುತ್ತಾರೆ. ನಾವು ಸಮಾವೇಶದಲ್ಲಿ ಈ ವಿಚಾರಗಳ ಬಗ್ಗೆ ಮಾತನಾಡೊಲ್ಲ.

ಪಂಚಮಸಾಲಿ ಗುರುಪೀಠಾಧ್ಯಕ್ಷರಾದ ಇನ್ನೊಬ್ಬ ಜಗದ್ಗುರುಗಳು ರಸ್ತೆ ಮೇಲೆ ಲಿಂಗ ಪೂಜೆ ಮಾಡಿ ಹೋರಾಟ ಮಾಡುತ್ತಿದ್ದಾರೆ. ನೀವು ಯಾಕೆ ಆ ರೀತಿಯ ಹೋರಾಟಕ್ಕೆ ಮುಂದಾಗುತ್ತಿಲ್ಲ ಎಂಬುದಕ್ಕೆ, ಎಲ್ಲಾ ಮನುಷ್ಯನ ಮನಸ್ಥಿತಿ ಒಂದೇ ತರಹದಲ್ಲಿ ಇರುವುದಿಲ್ಲ. ಹಾಗೆ ನಾವು ನಮ್ಮ ಸಮುದಾಯದ ಜನರಿಗೆ ನ್ಯಾಯವನ್ನು ಕೊಡಿಸಲು ಕಾನೂನು ಹೋರಾಟ ನಡೆಸಿರುವುದಾಗಿ ಶ್ರೀ ವಚನಾನಂದ ಮಹಾಸ್ವಾಮಿಗಳು ಹೇಳಿದರು.

# ಕೆಡಿಪಿ ಸಭೆಗೆ ಅಧಿಕಾರಿಗಳ ಗೈರು ನೋಟೀಸ್ ನೀಡಲು ಶಾಸಕರ ಸೂಚನೆ



**ರಾಣೇಬೆನ್ನೂರು ತಾಲ್ಲೂಕು ಪಂಚಾಯ್ತಿ ಕೆಡಿಪಿ ಸಭೆ**

ರಾಣೇಬೆನ್ನೂರು, ಡಿ. 17 - ಈಗ ಸದ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಿದ್ದರೂ, ಮುಂದೆ ಬರಬಹುದು ಎನ್ನುವ ಅರಿವಿನೊಂದಿಗೆ ಮುಂಜಾಗ್ರತೆ ಕ್ರಮ ಕೈಗೊಳ್ಳುವ ಅವಶ್ಯಕತೆ ಇದೆ. ಕಾರಣ ಕೊಳವೆ ಬಾವಿಗಳ ದುರಸ್ತಿ, ಹೊಸ ಕೊಳವೆ ಬಾವಿ ಕೊರೆಯುವುದು ಜೊತೆಗೆ ಖಾಸಗಿಯ ಕೊಳವೆಬಾವಿ ಎರವಲು ಪಡೆಯುವ ಬಗ್ಗೆ ಸನ್ನದ್ದರಾಗಿರುವಂತೆ ಶಾಸಕ ಪ್ರಕಾಶ ಕೋಳಿವಾಡ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಇಲ್ಲಿನ ತಾ.ಪಂ. ಸಭಾ ಭವನದಲ್ಲಿ ನಿನ್ನೆ ನಡೆದ ಕೆಡಿಪಿ ಸಭೆಯಲ್ಲಿ ಎಲ್ಲಾ ಇಲಾಖೆಗಳ ಪ್ರಗತಿ ಪರಿಶೀಲನೆಯನ್ನು ಅವರು ನಡೆಸಿದರು.

ಶಾಲೆಗಳಲ್ಲಿನ ಶೌಚಾಲಯ ದುರಸ್ತಿ ಹಾಗೂ ಸ್ವಚ್ಛತೆ, ಬಿಸಿ ಊಟದ ಗುಣಮಟ್ಟ, ಹಾಸ್ಟೆಲ್‌ಗಳ ದೂರುಗಳ ಬಗ್ಗೆ ಪ್ರಸ್ತಾಪಿಸಿ, ನಾನು ಖುದ್ದಾಗಿ ನಿಮಗೆ ತಿಳಿಸದೇ ಭೇಟಿ ಕೊಡುವೆ. ಯಾವುದೇ ನ್ಯೂನತೆ ಕಂಡುಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವೆ ಎಂದ ಶಾಸಕರು, ಎಸ್ಸಿ ಹಾಸ್ಟೆಲ್‌ನಲ್ಲಿ ಮಕ್ಕಳಿಗೆ ಅವಕಾಶ ಕೊಡದೆ ಹಾಗೂ ಅಲ್ಲಿ ನಡೆದ ಘಟನೆ ಬಗ್ಗೆ ಸರಿಯಾದ ಮಾಹಿತಿ ಕೊಡುವಂತೆ ಸೂಚಿಸಿದರು.


ತಾಲ್ಲೂಕಿನ 26 ಗ್ರಾಮಗಳಿರುವ ಬ್ಯಾಡಗಿ ವಿಧಾನಸಭಾ ಕ್ಷೇತ್ರದಲ್ಲಿ 6 ಪಿಎಚ್ ಸಿ, 87 ಗ್ರಾಮಗಳಿರುವ ರಾಣೇಬೆನ್ನೂರು ವಿಧಾನಸಭಾ ಕ್ಷೇತ್ರದಲ್ಲಿ 3 ಪಿಎಚ್ ಸಿ ಗಳು 24/7 ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಸಾರ್ವಜನಿಕ ಆಸ್ಪತ್ರೆಯ ಡಾ : ರಾಜು ಶಿರೂರ ಅವರಿಂದ ಮಾಹಿತಿ ಪಡೆದು, ಆರೋಗ್ಯ ಸಚಿವರಿಂದ ಹೆಚ್ಚಿನ ಸಿಬ್ಬಂದಿ ತಂದು ಆಸ್ಪತ್ರೆಗಳನ್ನ ಹೆಚ್ಚಿಸುವ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಪ್ರಾರಂಭದಲ್ಲಿಯೇ ಸಭೆಗೆ ಹಾಜರಾದ ಅಧಿಕಾರಿಗಳೆಷ್ಟು, ಬಂದಿರುವ ಅವರ ಸಹಾಯಕರ ಬಗ್ಗೆ ಮಾಹಿತಿ ಪಡೆದು ಅಧಿಕಾರಿಗಳು ಗೈರುಹಾಜರಾದ ಬಗ್ಗೆ ಅವರಿಗೆ ಶೋಕಾಸ್ ನೋಟಿಸು ಕೊಡುವಂತೆ ಕಾರ್ಯನಿರ್ವಾಹಕ ಅಧಿಕಾರಿಗೆ ಸೂಚಿಸಿ, ಕಳೆದ ತಿಂಗಳು ನಡೆದ ಜನತಾದರ್ಶನದಲ್ಲಿ ಬಂದ ಅರ್ಜಿಗಳ ಬಗ್ಗೆ ಪ್ರತಿ ಇಲಾಖೆಯವರು ಕೈಗೊಂಡ ಕ್ರಮದ ಬಗ್ಗೆ ಪರಿಶೀಲನೆ ನಡೆಸಿ ಪ್ರತಿ ತಿಂಗಳು ನಡೆಯಲಿರುವ ಜನತಾ ದರ್ಶನದ ಕಾರ್ಯವನ್ನು ನಿಗದಿತ ಅವಧಿಯೊಳಗೆ ಪೂರೈಸುವಂತೆ ಆದೇಶಿಸಿದರು.

**ಎಂಎಲ್ಲೆ ಐಎಎಸ್ ಅಲ್ಲಾ !**

ಎಂಎಲ್ಎ, ಐಎಎಸ್, ಐಪಿಎಸ್ ಅಧಿಕಾರಿಯಲ್ಲ ಹಳ್ಳಿಗಳಿಂದ ಬಂದು ಶಾಸಕರಾಗಿರ್ತಾರೆ. ಅವರಿಗೆ ತಿಳಿಯುವ ಭಾಷೆಯಲ್ಲಿ ನೀವು ಪ್ರಗತಿಯ ವರದಿ ಒಪ್ಪಿಸಬೇಕು. ನಿಮ್ಮದೇ ಆದ ತಾಂತ್ರಿಕ ಭಾಷೆಯಲ್ಲಿ ಮಾತನಾಡಿದರೆ ನಮಗೆ ಅರ್ಥ ಆಗಲ್ಲ. ನಿಮ್ಮ ಭಾಷೆಯಲ್ಲಿ ಮಾತನಾಡಿ ನಮ್ಮನ್ನು ಯಾಮಾರಿಸುವ ಪ್ರಯತ್ನ ಮಾಡಬೇಡಿ ಎಂದು ಜಿ.ಪಂ. ಅಧಿಕಾರಿ ಒಪ್ಪಿಸುತ್ತಿದ್ದ ಪ್ರಗತಿಯ ವರದಿಯ ಬಗ್ಗೆ ಶಾಸಕ ಪ್ರಕಾಶ ಕೋಳಿವಾಡ ಸಿಡುಕಿದರು.

# 21ರಿಂದ ಕಾನಾಮಡುವಿನ ಜಾತ್ರಾ ಮಹೋತ್ಸವ




ಜಗಳೂರು, ಡಿ.17- ಶ್ರೀ ಕ್ಷೇತ್ರ ಕಾನಮಡುವಿನ ಶ್ರೀ ಶರಣ ಬಸವೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಇದೇ ದಿನಾಂಕ 21 ರಿಂದ 23 ರವರೆಗೆ ಜರುಗಲಿದೆ ಎಂದು ಧರ್ಮಾಧಿಕಾರಿ ಶ್ರೀ ದಾ.ಮ.ಐಮಡಿ ಶರಣಾರ್ಯರು ತಿಳಿಸಿದ್ದಾರೆ.

ಇದೇ ದಿನಾಂಕ 21 ರ ಗುರುವಾರ ಸಂಜೆ 6 ಗಂಟೆಗೆ ಕಾರ್ತಿಕ ದೀಪೋತ್ಸವ, ಡಿ.22 ಶುಕ್ರವಾರ ಸಂಜೆ 4 ಗಂಟೆಗೆ ಸ್ವಾಮಿ ರಥೋತ್ಸವ, ಡಿ.23 ಶನಿವಾರ ಸಂಜೆ 6ಕ್ಕೆ ಸ್ವಾಮಿಯ ಪಲ್ಲಕ್ಕಿ ಉತ್ಸವ ನಡೆಯಲಿದ್ದು ಮುಸ್ಟೂರು ಓಂಕಾರೇಶ್ವರ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಕೊಟ್ಟೂರು ಹಿರೇಮಠದ ಶ್ರೀ ಯೋಗಿ ರಾಜೇಂದ್ರ ಶಿವಾಚಾರ್ಯ ಸ್ವಾಮೀಜಿ, ಚನ್ನಗಿರಿ ಹಿರೇಮಠದ ಶ್ರೀ ಕೇದಾರಲಿಂಗ ಶಿವಾಚಾರ್ಯ ಸ್ವಾಮೀಜಿ, ಕೂಡ್ಲಿಗಿ ಶ್ರೀ ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸಲಿದ್ದಾರೆ.

ದಿನಾಂಕ 21ರ ಗುರುವಾರ ಚಿತ್ರದುರ್ಗದ ಗಂಜಿಗಟ್ಟೆ ಕೃಷ್ಣಮೂರ್ತಿ ಮತ್ತು ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಧಾತ್ರಿ ರಂಗ ಸಂಸ್ಥೆ ಸಿರಿಗೆರೆ ಅವರಿಂದ ಅಕ್ಕನಾಗಲಾಂಬಿಕೆ ನಾಟಕ ಅಭಿನಯ, ನಂತರ ಭಜನಾ ಕಾರ್ಯಕ್ರಮವಿರುತ್ತದೆ. ಡಿ.22 ಶುಕ್ರವಾರ ರಕ್ತದಾನ ಶಿಬಿರ, ಸಾಮೂಹಿಕ ವಿವಾಹ, ಭರತನಾಟ್ಯ, ಜಾನಪದ, ವಚನ ನೃತ್ಯಗಳು, ರಾತ್ರಿ ಮರಿಯಮ್ಮನಹಳ್ಳಿ ರಂಗಚೇತನ ಕಲಾ ಟ್ರಸ್ಟ್ ವತಿಯಿಂದ ಕರ್ಣಭಾರ ನಾಟಕ ಅಭಿನಯವಿರುತ್ತದೆ ವಿವಾಹವಾಗಲು ಇಚ್ಛಿಸುವವರು ಮೊ.ಸಂ.: 99866 22241, 78291 54147, 96201 06505 ಸಂಪರ್ಕಿಸಬಹುದು.

## ಕಡ್ಲೇಬಾಳು : ಶ್ರೀ ನಾಗಸುಬ್ರಹ್ಮಣ್ಯ ಸ್ವಾಮಿಗೆ ಇಂದು ಪಂಚಾಮೃತ ಅಭಿಷೇಕ, ರಥೋತ್ಸವ



ದಾವಣಗೆರೆ ತಾಲ್ಲೂಕಿನ ಕಡ್ಲೇಬಾಳು ಗ್ರಾಮದ ಶ್ರೀ ಕ್ಷೇತ್ರ ನಾಗಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ ಶ್ರೀ ನಾಗಸುಬ್ರಹ್ಮಣ್ಯ ಸ್ವಾಮಿಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಅಷ್ಟೋತ್ತರ ಪೂಜೆ, ಆಶ್ಲೇಷ ಬಲಿ ಪೂಜೆ, ಸುಬ್ರಹ್ಮಣ್ಯ ಮೂಲ ಮಂತ್ರ, ಹೋಮ ಹಾಗೂ ಸ್ವಾಮಿಯ ರಥೋತ್ಸವ ಸೇವಾ ನಡೆಯುತ್ತದೆ. ಮಹಿಳಾ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ, ಪ್ರಸಾದ ವಿತರಣೆ ಇರುತ್ತದೆ.

# ದೇಶಕ್ಕೆ ಮೋದಿ, ದಾವಣಗೆರೆಗೆ ಸಿದ್ದಣ್ಣ



ದಾವಣಗೆರೆ, ಡಿ. 16 - ದೇಶದಲ್ಲಿ ಮೋದಿ, ದಾವಣಗೆರೆಗೆ ಸಿದ್ದಣ್ಣ ಮತ್ತೊಮ್ಮೆ ಅಧಿಕಾರಕ್ಕೆ ಬರುವುದನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ ಎಂದು ಶೋಷಿತ ವರ್ಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಗರದ ಜಿಎಂಐಟಿ ಅತಿಥಿ ಗೃಹದಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, 2024ರ ಚುನಾವಣೆಯಲ್ಲಿ ಬಿಜೆಪಿಯೇ ಕೇಂದ್ರದಲ್ಲಿ ಅಧಿಕಾರ ಹಿಡಿಯುವುದು ಎಂದಿದ್ದಾರೆ. ಸಿದ್ದೇಶ್ವರ ಅವರು ದಾವಣಗೆರೆಯ ಮನೆ ಮಗನಿದ್ದಂತೆ, ಈ ಬಾರಿಯೂ ಅವರೇ ಲಕ್ಷ ಮತಗಳ ಅಂತರದಿಂದ ಗೆಲ್ಲುತ್ತಾರೆ ಎಂದರು.

ಬಿಜೆಪಿ ಹಿರಿಯ ಮುಖಂಡ ಬಿ.ಟಿ. ಸಿದ್ದಪ್ಪ ಮಾತನಾಡಿ, ಸಾವಿರಾರು ಕೋಟಿ ಅನುದಾನ ತಂದು ದಾವಣಗೆರೆ ಜಿಲ್ಲೆಯನ್ನು ಅಭಿವೃದ್ಧಿ ಮಾಡಿರುವ ಸಂಸದ ಸಿದ್ದೇಶ್ವರ ಅವರೇ ಮುಂದಿನ ಸಂಸದರು, ಇದು ಸೂರ್ಯ ಚಂದ್ರ ಎಷ್ಟು ಸತ್ಯವೋ, ಸಿದ್ದಣ್ಣ ಸಂಸದರಾಗುವುದು ಅಷ್ಟೇ ಸತ್ಯ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಉಪಾಧ್ಯಕ್ಷ ಶ್ರೀನಿವಾಸ್ ದಾಸ ಕರಿಯಪ್ಪ, ಮಹಾನಗರ ಪಾಲಿಕೆ ಮಾಜಿ ಸದಸ್ಯ ಶಿವನಗೌಡ ಪಾಟೀಲ್, ಮಾತೃ ದೇವಭವ ಸಂಸ್ಥೆಯ ಸಂಸ್ಥಾಪಕ ಎಸ್.ಪಿ. ಶ್ರೀನಿವಾಸ್.ನವೀನ್ ಕುಮಾರ್ ಗುಬ್ಬಿ, ಆರ್. ವಿ. ಲಕ್ಷ್ಮಿಕಾಂತ್ ಇನ್ನೂ ಮುಂತಾದವರಿದ್ದರು.

# ಅಧಿವೇಶನಕ್ಕೆ ನೊಳಂಬ ವೀರಶೈವ ಸಮಾಜದ ಕಡೆಗಣನೆ : ಸಮಾಜದ ಮುಖಂಡರ ಖಂಡನೆ



ಮಲೇಬೆನ್ನೂರು, ಡಿ.17- ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದಿಂದ ದಾವಣಗೆರೆಯಲ್ಲಿ ಇದೇ ದಿನಾಂಕ 23 ಮತ್ತು 24 ರಂದು ಹಮ್ಮಿಕೊಂಡಿರುವ 24ನೇ ಮಹಾ ಅಧಿವೇಶನವನ್ನು ನೊಳಂಬ ವೀರಶೈವ ಸಮಾಜದ ನಾವು ಬಹಿಷ್ಕರಿಸುತ್ತೇವೆ ಎಂದು ನಂದಿಗುಡಿ ಬೃಹನ್ಮಠದ ಟ್ರಸ್ಟಿ ಶಿಕಾರಿಪುರದ ಎಸ್.ವಿ.ಮಹೇಂದ್ರ ತಿಳಿಸಿದರು.

ಅವರು, ಭಾನುವಾರ ನಂದಿಗುಡಿ ಬೃಹನ್ಮಠದಲ್ಲಿ ಕರೆದಿದ್ದ ಸಮಾಜದ ತುರ್ತುಸಭೆಯಲ್ಲಿ ಮಾತನಾಡಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾವು ನಮ್ಮ ಸಮಾಜವನ್ನು ಕಡೆಗಣಿಸಿದೆ ಎಂದು ದೂರಿದರು.

ನಂದಿಗುಡಿ ಬೃಹನ್ಮಠವು 5 ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿದೆ. ಅಲ್ಲದೇ, ರಾಜ್ಯದಲ್ಲಿ ನೊಳಂಬ ವೀರಶೈವ ಸಮಾಜದ 12 ಮಠಗಳಿದ್ದು, ವೀರಶೈವ ಲಿಂಗಾಯತರ ಜನಸಂಖ್ಯೆಯಲ್ಲಿ ನೊಳಂಬ ವೀರಶೈವ ಸಮಾಜವು 3ನೇ ದೊಡ್ಡ ಸಮಾಜವಾಗಿದೆ.

ಇಷ್ಟಿದ್ದರೂ ನಮ್ಮ ಸಮಾಜದ ಗುರುಗಳನ್ನು ಅಧಿವೇಶನಕ್ಕೆ ಆಹ್ವಾನಿಸಿಲ್ಲ. ಬೇರೆ ಬೇರೆ ವೀರಶೈವ ಲಿಂಗಾಯತ ಸಮಾಜದ ಮಾಜಿ ಶಾಸಕರನ್ನೂ ಅಧಿವೇಶನಕ್ಕೆ ಆಹ್ವಾನಿಸಿದ್ದಾರೆ. ಆದರೆ, ದಾವಣಗೆರೆ ಜಿಲ್ಲೆಯಲ್ಲಿರುವ ನಮ್ಮ ಸಮಾಜದ ಏಕೈಕ ಮಾಜಿ ಶಾಸಕ ಡಾ. ಡಿ.ಬಿ.ಗಂಗಪ್ಪ ಅವರನ್ನೂ ಪರಿಗಣಿಸಿಲ್ಲ ಎಂದು ಮಹೇಂದ್ರ ತೀವ್ರ ಬೇಸರ ವ್ಯಕ್ತಪಡಿಸಿದರು.

ಈ ಎಲ್ಲಾ ವಿಚಾರಗಳಿಂದಾಗಿ ಮಹಾಅಧಿವೇಶನಕ್ಕೆ ನೊಳಂಬ ವೀರಶೈವ ಸಮಾಜದವರು ಹೋಗದಿರಲು ನಿರ್ಧರಿಸಿದ್ದೇವೆ. ಮುಂದಿನ ದಿನಗಳಲ್ಲಿ ಈ ಬಗ್ಗೆ ಸೂಕ್ತ ನಿರ್ಧಾರಕ್ಕೆ ಬರಲಾಗುವುದೆಂದು ಎಸ್.ವಿ.ಮಹೇಂದ್ರ ತಿಳಿಸಿದರು.

ಹಿರಿಯ ಸಾಹಿತಿ ಕತ್ತಿಗೆ ಚನ್ನಪ್ಪ, ಶಿವಮೊಗ್ಗ ಜಿಲ್ಲೆಯ ರಾಜಶೇಖರ್, ಡಾ.ವೇದಮೂರ್ತಿ, ಡಾ. ಕೆ.ಎಂ.ಜಗದೀಶ್, ಹಾವೇರಿ ಜಿಲ್ಲೆಯ ಸುರೇಶ್ ಹುಚ್ಚಣ್ಣರ, ಅನಂತ ದೇವರಮನಿ, ತುಮಕೂರಿನ ಉಮೇಶ್ ಬಣಕಾರ್, ಹಾಸನದ ಶಿವಕುಮಾರ್, ಬೆಂಗಳೂರಿನ ಲೋಕಪ್ರಿಯ, ಹರಿಹರ ತಾಲ್ಲೂಕಿನ ಹಿಂಡಸಘಟ್ಟಿಯ ಮುರುಗೇಶಪ್ಪ, ಕೆ.ಎನ್.ಹಳ್ಳಿಯ ಬಿ.ಬಿ.ನಂದಿಗೌಡ, ಜಿ.ಬೇವಿನಹಳ್ಳಿಯ ಬಂಡೇರ್ ಮಂಜುನಾಥ್, ಗೋವಿನಹಾಳ್ ಎಂ.ಬಿ. ಹನುಮಗೌಡ, ಜಿಗಳಿಯ ಜಿ.ಪಿ.ಮಂಜುನಾಥ್ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಸಮಾಜದವರು ಸಭೆಯಲ್ಲಿ ಭಾಗವಹಿಸಿದ್ದರು.

## ಜಿಲ್ಲಾ ಕ.ಸಾ ಸಮ್ಮೇಳನ, ಇಂದು ಸಭೆ

ರಾಣೇಬೆನ್ನೂರಿನಲ್ಲಿ ಹಾವೇರಿ ಜಿಲ್ಲಾ 13 ನೇ ಕನ್ನಡ ಸಾಹಿತ್ಯ ಸಮ್ಮೇಳನ ಮಾಡುವ ಕುರಿತು ಇಂದು ಸಂಜೆ ಇಲ್ಲಿನ ಕಸಾಪ ಭವನದಲ್ಲಿ ಸಭೆ ಕರೆಯಲಾಗಿದ್ದು, ಆಸಕ್ತರು ಆಗಮಿಸಿ ಸಲಹೆ, ಸೂಚನೆಗಳನ್ನು ನೀಡಬೇಕು ಎಂದು ಪ್ರಕಟಣೆ ತಿಳಿಸಿದೆ.

## ಗಣೇಶ ಮೂರ್ತಿ ಪೂಜೆ ವಿಷಯ ಅನಗತ್ಯ ಸಂವಿಧಾನದಲ್ಲೇ ಧಾರ್ಮಿಕ ಸ್ವಾತಂತ್ರ್ಯವಿದೆ

**(1ನೇ ಪುಟದಿಂದ)** ಪ್ರೊ. ಎನ್. ಲಿಂಗಣ್ಣ, ನರಗನಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಆಶಾ ನಾಗರಾಜ, ಸದಸ್ಯರಾದ ಕಲ್ಲೇಶಪ್ಪ, ಮೀನಾಕ್ಷಮ್ಮ, ಅಕ್ಕಮ್ಮ ಇನ್ನಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಮುಖಂಡರಾದ ನೀಲಕಂಠಪ್ಪ, ಮರುಳಸಿದ್ದಪ್ಪ, ರುದ್ರಪ್ಪ. ಬಸವರಾಜಪ್ಪ, ರತ್ನಮ್ಮ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಬಾವಿಹಾಳು ಕುಮಾರ್ ನಿರೂಪಿಸಿದರು.

## ಹದಗೆಟ್ಟ ಬಾವಿಹಾಳ್ ಸಿರಿಗೆರೆ ರಸ್ತೆ, ತರಳಬಾಳು ಜಗದ್ಗುರುಗಳ ಕೋಪ

**(1ನೇ ಪುಟದಿಂದ)** ಮೀಸಲಿಟ್ಟರೂ ಕೆಲಸ ಮಾಡ ದಿರುವ ಇಂಜಿನಿಯರ್ ಮೇಲೆ ಕ್ರಮ ಕೈಗೊಳ್ಳಬೇಕಿತ್ತು ಎಂದು ಗುಡುಗಿದರು.

ನೂತನ ಶಾಸಕ ಬಸವಂತಪ್ಪ ಈ ರಸ್ತೆ ಕಾಮಗಾರಿಯನ್ನು ಮೂರು ತಿಂಗಳಲ್ಲಿ ಮುಗಿಸಿ, ಈ ಭಾಗದ ಜನರಿಗೆ ಅನುಕೂಲ ಮಾಡಬೇಕು. ಬಸವಂತಪ್ಪನವರೂ ಕಾಮಗಾರಿ ಮುಗಿಸದಿದ್ದರೆ, ಮುಂದಿನ ಕಾರ್ಯಕ್ರಮಗಳಲ್ಲಿ ನಮ್ಮ ಜೊತೆ ವೇದಿಕೆ ಹಂಚಿಕೊಳ್ಳುವಂತಿಲ್ಲ ಎಂದು ಜಗದ್ಗುರುಗಳು ತಾಕೀತು ಮಾಡಿದರು.

**ಜಗದ್ಗುರುಗಳ ಆದೇಶ ಪಾಲಿಸುವೆ : ಶಾಸಕ ಬಸವಂತಪ್ಪ**

ಗುರುಗಳ ಆದೇಶದಂತೆ ಸಿರಿಗೆರೆ-ಬಾವಿಹಾಳು ರಸ್ತೆಯನ್ನು ಮೂರು ತಿಂಗಳಲ್ಲಿ ಮುಗಿಸಿ, ಗುರುಗಳ ಆಶಯ ನೆರವೇರಿಸುವುದಾಗಿ ಶಾಸಕ ಬಸವಂತಪ್ಪ ವೇದಿಕೆಯಲ್ಲಿ ಭರವಸೆ ನೀಡಿದರು.

## ನಾಳೆ ತುಕ್ಕಾಭವಾನಿ ಕಾರ್ತಿಕೋತ್ಸವ

ರಾಣೇಬೆನ್ನೂರು, ಡಿ.17- ಇಲ್ಲಿನ ದೊಡ್ಡಪೇಟೆ ತುಕ್ಕಾಭವಾನಿ ದೇವಸ್ಥಾನದ ಕಾರ್ತಿಕೋತ್ಸವವು ನಾಳೆ ಮಂಗಳವಾರ ಸಂಜೆ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಶಿವಮೂರ್ತಿ ದಿಲ್ಲಿವಾಲಾ ತಿಳಿಸಿದ್ದಾರೆ.

## ಗೀತಮ್ಮ ಜೀ ನೇತೃತ್ವದಲ್ಲಿ 'ಆರೋಗ್ಯಕ್ಕಾಗಿ ಯೋಗ' ಕಾರ್ಯಕ್ರಮ



ದಾವಣಗೆರೆ, ಡಿ. 17- ನಗರದ ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬಿ.ಇಡಿ. ವಿದ್ಯಾರ್ಥಿಗಳಿಗೆ ಅಂತರರಾಷ್ಟ್ರೀಯ ಯೋಗ ಗುರುಗಳಾದ ಗೀತಮ್ಮ ಜೀ ಉತ್ತಮ ಆರೋಗ್ಯಕ್ಕಾಗಿ ಯೋಗದ ಮಹತ್ವವನ್ನು, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ವಿಧಾನಗಳು, ಏಕಾಗ್ರತೆ, ನೆನಪಿನ ಶಕ್ತಿಯನ್ನು ಹೆಚ್ಚಿಸುವ, ಬ್ರೈನ್ ಯೋಗ, ಮುದ್ರಾ ಪ್ರಾಣಾಯಾಮ, ಓಂಕಾರ ಧ್ಯಾನವನ್ನು ಪ್ರಾಯೋಗಿಕವಾಗಿ ತರಬೇತಿ ನೀಡಿದರು.

## ಭಾವಪೂರ್ಣ ಶ್ರದ್ಧಾಂಜಲಿ

ನೀ ಮರೆಯಾದರೂ ಕಳೆದ
ಕ್ಷಣಗಳು ಮರಳಿ ಬರಲಾರವು ...
ನೆರಳಿನಂತೆ ಒತ್ತೊತ್ತಿ ಕಣ್ಣೀರಿನ
ಜೊತೆ ಬರುತ್ತಿದೆ ನಿನ್ನ ನೆನಪು ...
ಜೀವನದಲ್ಲಿ ಪೂರ್ತಿ ನಗಲಾಗದು
ನೀನಿನಲ್ಲದೆ ಗೆಳೆಯ ...
ಮರಳಿಬರಲಾರೆಯಾ ... ?



ದಿನಾಂಕ 17.12.2023ರಂದು ಆಕಸ್ಮಿಕವಾಗಿ ನಿಧನರಾದ ನಮ್ಮೆಲ್ಲರ ಆತ್ಮೀಯ ಸಹೋದರಾದ

**ಶ್ರೀ ಜೆ.ಎಸ್. ಶಂಭುಲಿಂಗಪ್ಪ (ಶಂಭಣ್ಣ)**

ಅವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ನೀಡಲು ಎಂದು ಪ್ರಾರ್ಥಿಸುತ್ತೇವೆ.

**ಶ್ರೀ ವಿನಾಯಕ ಯುವಕರ ಸಂಘ**
ಬಸವರಾಜ ಪೇಟೆ, 2ನೇ ಕ್ರಾಸ್, ದಾವಣಗೆರೆ.

## ಜೆ.ಎಸ್. ಶಂಭುಲಿಂಗಪ್ಪ ನಿಧನ



ದಾವಣಗೆರೆ ಬಸವರಾಜ ಪೇಟೆ, 2ನೇ ಕ್ರಾಸ್ ವಾಸಿ ದಿ|| ಜಾಲಿ ಮರದ ಶರಣಪ್ಪ ಇವರ ಪುತ್ರರಾದ

**ಜೆ.ಎಸ್. ಶಂಭುಲಿಂಗಪ್ಪ**

ಇವರು, ದಿನಾಂಕ : 17.12.2023ರ ಭಾನುವಾರ ರಾತ್ರಿ 10.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 48 ವರ್ಷ ವಯಸ್ಸಾಗಿತ್ತು, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 18.12.2023ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :
**91645 17580, 81058 18681**

## ಕೋಡಬಾಳ್ ಅನುಸೂಯಮ್ಮ ನಿಧನ



ದಾವಣಗೆರೆ ಸಿಟಿ ಡೋರ್ ನಂ. 87/110 ಬಿ.ಟಿ. ಲೇಔಟ್ ವಾಸಿ ಕೋಡಬಾಳ್ ಚಂದ್ರಶೇಖರ್ ಇವರ ಧರ್ಮಪತ್ನಿ

**ಶ್ರೀಮತಿ ಕೋಡಬಾಳ್ ಅನುಸೂಯಮ್ಮ**

ಇವರು ದಿನಾಂಕ : 17.12.2023ರ ಭಾನುವಾರ ಬೆಳಿಗ್ಗೆ 10.25ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 84 ವರ್ಷ ವಯಸ್ಸಾಗಿತ್ತು, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 17.12.2023 ರ ಭಾನುವಾರ ಸಂಜೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ :
ಚಂದ್ರ ಮೆಡಿಕಲ್ ಸ್ಟೋರ್ಸ್, ಕಾಮಧೇನು ಮೆಡಿಕಲ್ ಏಜೆನ್ಸಿ
**90352 66799, 98805 64958**

## ಬೆಳ್ಳೂಡಿ ಮಠದಲ್ಲಿಂದು ಕಾರ್ತಿಕ

ಕಾಗಿನೆಲೆ ಕನಕ ಗುರುಪೀಠದ ಬೆಳ್ಳೂಡಿ ಶಾಖಾ ಮಠದಲ್ಲಿ ಇಂದು ಸಂಜೆ 7 ಗಂಟೆಗೆ ಕಾರ್ತಿಕೋತ್ಸವವನ್ನು ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಹಮ್ಮಿಕೊಳ್ಳಲಾಗಿದೆ.

## ಹರಿಹರ : ತುಂತುರು ನೀರಾವರಿ ಘಟಕಗಳಿಗೆ ರೈತರಿಂದ ಅರ್ಜಿ ಆಹ್ವಾನ

ಹರಿಹರ,ಡಿ.16- ಲಘು ನೀರಾವರಿ ಯೋಜನೆ ಅಡಿಯಲ್ಲಿ ರೈತರು ತುಂತುರು ನೀರಾವರಿ ಘಟಕಗಳನ್ನು ಪಡೆಯಲು ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಿಗೆ ಅರ್ಜಿ ಸಲ್ಲಿಸಬಹುದು. ಎಲ್ಲಾ ಸಾಮಾನ್ಯ, ಪ.ಜಾತಿ ಮತ್ತು ಪ.ಪಂಗಡದ ರೈತರಿಗೆ 90% ರಿಯಾಯತಿ ದರದಲ್ಲಿ ಘಟಕಗಳನ್ನು ವಿತರಿಸಲಾಗುವುದು. ಅರ್ಜಿಯ ಜೊತೆ ಪಹಣೆ, ಕೊಳವೆಬಾವಿ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಬುಕ್ ಪ್ರತಿ ಮತ್ತು ಒಂದು ಫೋಟೋ ಗಳನ್ನು ಸಲ್ಲಿಸಲು ತಿಳಿಸಿದೆ. ಹಾಗೆಯೇ ಕೃಷಿ ಸಂಸ್ಕರಣೆ ಯೋಜನೆಯಡಿ ಸಂಸ್ಕರಣಾ ಘಟಕಗಳಾದ ಹಿಟ್ಟಿನ ಗಿರಿಣಿ, ಕಾರದಪುಡಿ ಮಷಿನ್, ಶಾವಿಗೆ ಮಷಿನ್, ಎಣ್ಣೆಗಾಣ, ರಾಗಿ ಕ್ಲೀನಿಂಗ್ ಮಷಿನ್, ಇತ್ಯಾದಿ ಘಟಕವನ್ನು ಪಡೆಯಲು ರೈತರು ರೈತ ಸಂಪರ್ಕ ಕೇಂದ್ರಗಳಿಗೆ ಅರ್ಜಿ ಸಲ್ಲಿಸಬಹುದು. ಈ ಯೋಜನೆ ಅಡಿ ಸಾಮಾನ್ಯ ರೈತರಿಗೆ ಶೇ. 50 ಮತ್ತು ಎಸ್.ಸಿ. ಮತ್ತು ಎಸ್.ಟಿ. ರೈತರಿಗೆ ಶೇ. 90 ಸಹಾಯ ಧನ ಅಡಿಯಲ್ಲಿ ಘಟಕಗಳನ್ನು ವಿತರಿಸಲಾಗುವುದು ಎಂದು ಹರಿಹರ ಸಹಾಯಕ ಕೃಷಿ ಅಧಿಕಾರಿಗಳು ತಿಳಿಸಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಧಾರಾವಿ ಯೋಜನೆ ಅದಾನಿಗೆ ನೀಡಿರುವುದಕ್ಕೆ ಕಾಂಗ್ರೆಸ್ ಆಕ್ಷೇಪ**

ನವದೆಹಲಿ : ಮುಂಬೈನ ಧಾರಾವಿ ಮರು ಅಭಿವೃದ್ಧಿ ಯೋಜನೆಯನ್ನು ಅದಾನಿ ಸಮೂಹಕ್ಕೆ ನೀಡಿರುವುದಕ್ಕೆ ಆಕ್ಷೇಪಿಸಿರುವ ಕಾಂಗ್ರೆಸ್, ಜನರ ಸಂಕಷ್ಟದಲ್ಲಿ ಅದಾನಿ ಸಮೂಹ ಶ್ರೀಮಂತವಾಗುತ್ತಿದೆ ಎಂದು ಆರೋಪಿಸಿದೆ. ಅದಾನಿ ಸಮೂಹಕ್ಕೆ ನೆರವಾಗುವ ರೀತಿಯಲ್ಲಿ ಸರ್ಕಾರ ವರ್ತಿಸುತ್ತಿದೆ ಎಂದೂ ಪಕ್ಷ ಟೀಕಿಸಿದೆ. ಆದರೆ, ಅದಾನಿ ಸಮೂಹ ಈ ಆರೋಪಗಳನ್ನು ತಳ್ಳಿ ಹಾಕಿದೆ. ಈ ಯೋಜನೆಯ ರೂಪುರೇಷೆ ಎಲ್ಲರಿಗೂ ಸಮನಾಗಿದೆ ಎಂದು ತಿಳಿಸಿದೆ.

**ಭದ್ರತಾ ಮಂಡಳಿಯ ಹಳೆ ಕ್ಲಬ್ : ಜೈಶಂಕರ್**

ಬೆಂಗಳೂರು : ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಶಾಶ್ವತ ಸದಸ್ಯತ್ವ ನೀಡದೇ ಇರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ಭದ್ರತಾ ಮಂಡಳಿಯು ಹಳೆಯ ಕ್ಲಬ್ ರೀತಿ ಆಗಿದೆ. ಅದರ ಸದಸ್ಯರು ತಮ್ಮ ಹಿಡಿತ ಬಿಟ್ಟು ಕೊಡಲು ಬಯಸುತ್ತಿಲ್ಲ. ತಮ್ಮ ಪದ್ಧತಿಗಳನ್ನು ಪ್ರಶ್ನಿಸುವುದನ್ನೂ ಬಯಸುತ್ತಿಲ್ಲ ಎಂದಿದ್ದಾರೆ.

**ನನ್ನ ಅವಧಿಯಲ್ಲಿ ಭಾರತ ಮೂರನೇ ದೊಡ್ಡ ಆರ್ಥಿಕತೆಯಾಗಲಿದೆ : ಮೋದಿ**

ನವದೆಹಲಿ : ತಮ್ಮ ಮೂರನೇ ಅವಧಿಯಲ್ಲಿ ಭಾರತ ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗಲಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಸೂರತ್ ಡೈಮಂಡ್ ಬೌರ್ಸ್ ಸಮುಚ್ಚಯ ಉದ್ಘಾಟನೆಯ ವೇಳೆ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ. ಈ ಸಮುಚ್ಚಯ ನವ ಭಾರತದ ಬದ್ಧತೆಯ ಸಂಕೇತವೂ ಆಗಿದೆ ಎಂದವರು ಹೇಳಿದ್ದಾರೆ.

**ಗರೀಬಿ ಹಟಾವೋಗೆ ಪ್ರಧಾನಿ ಟೀಕೆ**

ವಾರಣಾಸಿ : ಕಾಂಗ್ರೆಸ್ ಪಕ್ಷದ ಗರೀಬಿ ಹಟಾವೋ ಘೋಷಣೆ ಟೀಕಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಪಕ್ಕಾ ಮನೆಗಳು ಹಾಗೂ ಜನರ ಮನೆಗಳಿಗೆ ಗ್ಯಾಸ್ ಸಿಲಿಂಡರ್ ಸಂಪರ್ಕ ಕಲ್ಪಿಸುವುದರಿಂದ ಜನರಲ್ಲಿ ಸಬಲೀಕರಣದ ಭಾವನೆ ಉಂಟಾಗಿದೆ ಎಂದಿದ್ದಾರೆ.

**ಸಂಸದರ ಅಮಾನತ್ ವಾಪಸ್ ಪಡೆಯಲು ಚೌಧರಿ ಒತ್ತಾಯ**

ನವದೆಹಲಿ : ಲೋಕಸಭೆಯ 13 ಸಂಸದರ ಅಮಾನತ್ತುಗೊಳಿಸಿರುವುದನ್ನು ವಾಪಸ್ ಪಡೆಯಬೇಕು. ಸಂಸದರು ತಮ್ಮ ನಿಲುವುಗಳನ್ನು ತಿಳಿಸಲು ಅವಕಾಶ ನೀಡಬೇಕು ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕರಾಗಿರುವ ಅಧೀರ್ ರಂಜನ್ ಚೌಧರಿ ಅವರು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಒತ್ತಾಯಿಸಿದ್ದಾರೆ.

**ಗಾಜಾದಲ್ಲಿ ದೊಡ್ಡ ಸುರಂಗ ಪತ್ತೆ ಮಾಡಿದ ಇಸ್ರೇಲ್ ಸೈನ್ಯ**

ಜೆರುಸಲೇಂ : ಗಾಜಾದಲ್ಲಿ ಹಮಾಸ್‌ನ ದೊಡ್ಡ ಸುರಂಗ ಪತ್ತೆ ಮಾಡಿರುವುದಾಗಿ ಇಸ್ರೇಲ್ ಸೈನ್ಯ ತಿಳಿಸಿದೆ. ಎರೆಜ್ ಗಡಿಯ ಸಮೀಪ ಸುರಂಗ ಪತ್ತೆಯಾಗಿದೆ. ಇದು ಸಣ್ಣ ವಾಹನಗಳು ಸಾಗುವಷ್ಟು ದೊಡ್ಡ ಗಾತ್ರದ್ದಾಗಿದೆ ಎಂದು ಎ.ಎಫ್.ಪಿ. ಸುದ್ದಿ ಸಂಸ್ಥೆ ವರದಿ ಮಾಡಿದೆ. ಈ ಸುರಂಗ ನಿರ್ಮಿಸಲು ಲಕ್ಷಾಂತರ ಡಾಲರ್ ವೆಚ್ಚವಾಗಿದೆ. ಇದರಲ್ಲಿ ರೈಲು, ವಿದ್ಯುತ್, ಚರಂಡಿ ಹಾಗೂ ಸಂಪರ್ಕ ಜಾಲವೂ ಇದೆ ಎಂದು ಇಸ್ರೇಲ್ ಹೇಳಿದೆ.

## ಸಂಸತ್ ಸಂಕೀರ್ಣದ ಭದ್ರತೆ ಪರಿಶೀಲನೆಗೆ ಸಮಿತಿ : ಓಂ ಬಿರ್ಲಾ

ನವದೆಹಲಿ, ಡಿ. 17 – ಸಂಸತ್ ಸಂಕೀರ್ಣದ ಭದ್ರತೆಯ ಕುರಿತ ಹಲವಾರು ಅಂಶಗಳ ಪರಿಶೀಲನೆಗಾಗಿ ಉನ್ನತ ಹಂತದ ಸಮಿತಿಯೊಂದನ್ನು ರಚಿಸಲಾಗಿದೆ ಎಂದು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ಸದನದ ಸದಸ್ಯರಿಗೆ ತಿಳಿಸಿದ್ದಾರೆ. ಡಿಸೆಂಬರ್ 13ರಂದು ನಡೆದ ಘಟನೆ ಮರುಕಳಿಸುವುದನ್ನು ತಡೆಯಲು ಕ್ರಿಯಾ ಯೋಜನೆ ರೂಪಿಸಲಾಗುವುದು ಎಂದೂ ಅವರು ಹೇಳಿದ್ದಾರೆ.

ಲೋಕಸಭಾ ಸದಸ್ಯರಿಗೆ ಪತ್ರ ಬರೆದಿರುವ ಬಿರ್ಲಾ, ಕೇಂದ್ರ ಗೃಹ ಸಚಿವಾಲಯ ಉನ್ನತ ಹಂತದ ಸಮಿತಿಯನ್ನು ಈಗಾಗಲೇ ರಚಿಸಿದೆ. ಅದರ ವರದಿಯನ್ನು ಶೀಘ್ರದಲ್ಲೇ ಸದನದ ಜೊತೆ ಹಂಚಿಕೊಳ್ಳಲಾಗುವುದು ಎಂದು ಹೇಳಿದ್ದಾರೆ.

ಇದರ ಜೊತೆಗೆ ನಾನೂ ಸಹ ಉನ್ನತ ಹಂತದ ಸಮಿತಿಯನ್ನು ರಚಿಸಿದ್ದೇನೆ. ಅದು ಸಂಸತ್ ಸಂಕೀರ್ಣದ ಹಲವಾರು ವಿಷಯಗಳ ಬಗ್ಗೆ ಪರಿಶೀಲಿಸಲಿದೆ. ಸ್ಪಷ್ಟ ಕ್ರಿಯಾ ಯೋಜನೆಯನ್ನು ಸಲ್ಲಿಸಲಿದೆ ಎಂದು ಬಿರ್ಲಾ ತಿಳಿಸಿದ್ದಾರೆ.

## ಶಾಲೆಯಲ್ಲಿ ವಿದ್ಯಾರ್ಥಿನಿಯ ಬೆತ್ತಲೆ ವಿಡಿಯೋ ಚಿತ್ರೀಕರಣದ ಆರೋಪ

**(1ನೇ ಪುಟದಿಂದ)** ಇರುವ ಜಾಲದ ಕುರಿತು ಪರಿಶೀಲನೆ ನಡೆಸುತ್ತಿದ್ದೇವೆ. ಈಗಾಗಲೇ ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.

ಶೌಚಾಲಯದ ಗುಂಡಿಗೆ ಮಕ್ಕಳನ್ನು ಇಳಿಸಿ ಸ್ವಚ್ಛತೆ ಮಾಡಿಸಲಾಗಿತ್ತು ಎಂಬ ಆರೋಪ ಕೇಳಿ ಬಂದಿತ್ತು. ಅದರ ಬೆನ್ನಲ್ಲೇ ಈ ಆರೋಪವೂ ಕೇಳಿ ಬಂದಿದೆ. ಈಗಾಗಲೇ ಯಲುವಳ್ಳಿ ಬಳಿಯ ವಸತಿ ಶಾಲೆಯ ಪ್ರಿನ್ಸಿಪಾಲ್ ಭಾರತಮ್ಮ, ಶಿಕ್ಷಕ ಮುನಿಯಪ್ಪ, ವಾರ್ಡನ್ ಮಂಜುನಾಥ್ ಅಮಾನತ್ತು ಮಾಡಲಾಗಿದೆ. ಈ ಬಗ್ಗೆ ತನಿಖೆ ನಡೆಸಲು ಆದೇಶಿಸಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ.

# ಬೆಳಗಾವಿಯಲ್ಲಿ ಮಹಿಳೆಯ ದೌರ್ಜನ್ಯ ಖಂಡಿಸಿ ಬಿಜೆಪಿ ಪ್ರತಿಭಟನೆ

ದಾವಣಗೆರೆ, ಡಿ17- ಬೆಳಗಾವಿ ಜಿಲ್ಲೆಯಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ಮೆರವಣಿಗೆ ನಡೆಸಿದ ಘಟನೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಪ್ರಕರಣ ಹಿಂಪಡೆದಿರುವುದು ಹಾಗೂ ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಹೆಚ್ಚುತ್ತಿರುವುದನ್ನು ಖಂಡಿಸಿ ಬಿಜೆಪಿ ಜಿಲ್ಲಾ ಘಟಕದಿಂದ ಶನಿವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಬಿಜೆಪಿ ಜಿಲ್ಲಾ ಕಚೇರಿಯಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿದ ಪಕ್ಷದ ಪ್ರಮುಖರು, ಕಾರ್ಯಕರ್ತರು, ಕಾಂಗ್ರೆಸ್ ಆಡಳಿತದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದರು. ಬಳಿಕ ಜಯದೇವ ವೃತ್ತದಲ್ಲಿ ಕೆಲಹೊತ್ತು ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹರಿಹರ ಶಾಸಕ ಬಿ.ಪಿ. ಹರೀಶ್, ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಅದೇ ಜಿಲ್ಲೆಯಲ್ಲಿ ಮಹಿಳೆಯೋರ್ವಳನ್ನು ವಿವಸ್ತ್ರಗೊಳಿಸಿ, ಮೆರವಣಿಗೆ ಮಾಡಿ ಹಲ್ಲೆ ನಡೆಸಿರುವ ಅಮಾನವೀಯ ಘಟನೆ ನಡೆಯಿತು. ಈ ಘಟನೆಯಿಂದ ಇಡೀ ಸಮಾಜವೇ ತಲೆಗ್ಗಿಸುವಂತಾಗಿದೆ. ಇನ್ನು ವ್ಯಾಪಕವಾಗಿ ಹೆಣ್ಣು ಭ್ರೂಣ ಹತ್ಯೆ ನಡೆಯುತ್ತಿರುವುದು ಬೆಳಕಿಗೆ ಬಂದಿದೆ. ಇದು ಕಾಂಗ್ರೆಸ್ ಆಡಳಿತದ ವೈಫಲ್ಯತೆ ಎತ್ತಿ ತೋರಿಸುತ್ತದೆ ಎಂದರು.



ಆದಾಯ ಮೀರಿ ಆಸ್ತಿ ಸಂಗ್ರಹಕ್ಕೆ ಸಂಬಂಧಿಸಿದಂತೆ ಹಿಂದಿನ ಸರ್ಕಾರದ ಅವಧಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮೇಲೆ ಹಾಕಿದ್ದ ಪ್ರಕರಣವನ್ನು ಕಾಂಗ್ರೆಸ್ ಸರ್ಕಾರ ಹಿಂಪಡೆದಿರುವುದು ಖಂಡನೀಯ. ಈ ಕೃತ್ಯದ ಮೂಲಕ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರಕ್ಕೆ ತನ್ನ ಸಹಕಾರ ಇರುವುದನ್ನು ಸಾಬೀತುಪಡಿಸಿದೆ. ಕಾಂಗ್ರೆಸ್ ಸರ್ಕಾರ ತಾನು ಘೋಷಿಸಿದ ಗ್ಯಾರಂಟಿ ಯೋಜನೆಗಳನ್ನೂ ಸಹ ಸರಿಯಾಗಿ ಜಾರಿಗೊಳಿಸದೆ ಜನರ ದಿಕ್ಕು ತಪ್ಪಿಸುತ್ತಿದೆ. ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ ಖಂಡಿಸಿ ರಾಜ್ಯಾದ್ಯಂತ ಬಿಜೆಪಿ, ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಮಟ್ಟಗಳಲ್ಲಿಯೂ ಹೋರಾಟ ನಡೆಸಲಿದೆ ಎಂದರು.

**ಡಿ.ಕೆ. ಶಿವಕುಮಾರ್ ವಿರುದ್ಧದ ಪ್ರಕರಣ ಹಿಂಪಡೆದದ್ದು ಹಾಗೂ ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಹೆಚ್ಚುತ್ತಿರುವುದನ್ನು ಖಂಡಿಸಿದ ಬಿಜೆಪಿ ಮುಖಂಡರು**

ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ವಿ.ಪ. ಮಾಜಿ ಮುಖ್ಯಸಚೇತಕ ಡಾ. ಶಿವಯೋಗಿಸ್ವಾಮಿ, ದೂಡಾ ಮಾಜಿ ಅಧ್ಯಕ್ಷ ಕೆ.ಎಂ. ಸುರೇಶ್, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಕೆ.ಪ್ರಸನ್ನಕುಮಾರ್, ಸದಸ್ಯ ಕೆ.ಎಂ. ವೀರೇಶ್, ಎಸ್.ಟಿ. ವೀರೇಶ್, ಮುಖಂಡರುಗಳಾದ ಬಿ.ಎಸ್. ಜಗದೀಶ್, ಶ್ರೀನಿವಾಸ ದಾಸಕರಿಯಪ್ಪ, ಮಂಜಳಾ ಮಹೇಶ್, ಭಾಗ್ಯ ಪಿಸಾಳೆ, ಎಚ್.ಪಿ. ವಿಶ್ವಾಸ್ ಇನ್ನಿತರರು ಪ್ರತಿಭಟನೆಯಲ್ಲಿದ್ದರು.

## ವಲಸೆಯೇ ಶತ್ರುಗಳ ಅಸ್ತ್ರ

**(1ನೇ ಪುಟದಿಂದ)** ತಿಳಿಸಿದರು. ಅಕ್ರಮ ವಲಸೆಯಿಂದ ನಮ್ಮ ದೇಶಗಳ ಮೇಲೆ ಹೊರೆಯಾಗಲಿದೆ. ಇದರಿಂದಾಗಿ ವಾಸ್ತವಿಕವಾಗಿ ಅಗತ್ಯವಿರುವವರಿಗೆ ನೆರವು ಸಿಗದೇ ಇರಬಹುದು. ಅಕ್ರಮ ವಲಸೆ ತಡೆಗೆ ನಮ್ಮ ಕಾಯ್ದೆಗಳಲ್ಲಿ ಬದಲಾವಣೆ ತರಬೇಕಿದೆ. ಈ ಬಗ್ಗೆ ಅಂತರರಾಷ್ಟ್ರೀಯ ಸಂವಾದ ನಡೆಯಬೇಕಿದೆ. ಈ ಸಮಸ್ಯೆಗಳನ್ನು ಬಗೆಹರಿಸದೇ ಹೋದರೆ, ಅಕ್ರಮ ವಲಸಿಗರ ದೋಣಿಗಳು ನಮ್ಮ ಕಡೆ ಬರುತ್ತಲೇ ಇರುತ್ತವೆ ಎಂದು ಸುನಕ್ ಹೇಳಿದರು.

ಇಂಗ್ಲಿಷ್ ಚಾನಲ್ ದಾಟಿ ದೊಡ್ಡ ಪ್ರಮಾಣದಲ್ಲಿ ಅಕ್ರಮ ವಲಸಿಗರು ಬ್ರಿಟನ್‌ಗೆ ಬರುತ್ತಿದ್ದಾರೆ. ಇದನ್ನು ತಡೆಯುವುದಾಗಿ ಸುನಕ್ ಸರ್ಕಾರ ಈ ಹಿಂದೆ ತಿಳಿಸಿತ್ತು.

ಅಪರಾಧಿಕ ತಂಡಗಳು ಜನರನ್ನು ನಮ್ಮೆಡೆ ರವಾನಿಸಲು ದುಷ್ಟ ಮಾರ್ಗಗಳನ್ನು ಹುಡುಕುತ್ತವೆ. ಅವರು ನಮ್ಮ ಮಾನವೀಯತೆ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಅವರು ದೋಣಿಗಳಲ್ಲಿ ಜನರನ್ನು ತುಂಬಿ ಸಮುದ್ರದ ಅಪಾಯಕಾರಿ ಮಾರ್ಗಗಳ ಮೂಲಕ ಕಳಿಸುತ್ತಿದ್ದಾರೆ ಎಂದು ಬ್ರಿಟನ್ ಪ್ರಧಾನಿ ಹೇಳಿದರು.

## 1.5 ಲಕ್ಷ ಕೋಟಿ ಹೂಡಿಕೆ

**(1ನೇ ಪುಟದಿಂದ)** ದರ ಏರಿಕೆಯ ಪರಿಸ್ಥಿತಿ ವಿದೇಶಿ ಹೂಡಿಕೆಯ ಮೇಲೆ ಪರಿಣಾಮ ಬೀರಿತ್ತು ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರೀಸರ್ಚ್ ಸಹಾಯಕ ವ್ಯವಸ್ಥಾಪಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಈಗ ಭಾರತದ ಆರ್ಥಿಕತೆ ಬೆಳೆಯುವಲ್ಲಿ ಭರವಸೆ ಮೂಡಿದೆ. ಹೀಗಾಗಿ ನಿರಂತರವಾಗಿ ವಿದೇಶಿ ಹೂಡಿಕೆ ಆಕರ್ಷಿಸುತ್ತಿದೆ ಎಂದವರು ತಿಳಿಸಿದ್ದಾರೆ.

ಫಾರಿನ್ ಪೋರ್ಟ್‌ಫೋಲಿಯೋ ಇನ್ವೆಸ್ಟರ್ಸ್ (ಎಫ್.ಪಿ.ಐ.) ಇದುವರೆಗೂ 1.5 ಲಕ್ಷ ಕೋಟಿ ರೂ.ಗಳನ್ನು ಷೇರು ಪೇಟೆಯಲ್ಲಿ ಹೂಡಿಕೆ ಮಾಡಿದ್ದಾರೆ. ಇದರ ಜೊತೆಗೆ ಸಾಲ ಮಾರುಕಟ್ಟೆಯಲ್ಲಿ 60 ಸಾವಿರ ಕೋಟಿ ರೂ.ಗಳ ಹೂಡಿಕೆ ಮಾಡಿದ್ದಾರೆ. ಒಟ್ಟಾರೆ ಹರಿದು ಬಂದಿರುವ ಬಂಡವಾಳ 2 ಲಕ್ಷ ಕೋಟಿ ರೂ.ಗಳನ್ನು ದಾಟಿದೆ ಎಂದು ಹೂಡಿಕೆದಾರರ ಬಳಿ ಲಭ್ಯವಿರುವ ಮಾಹಿತಿ ತಿಳಿಸಿದೆ.

ಡಿಸೆಂಬರ್ ತಿಂಗಳ ಮೊದಲ ಎರಡು ವಾರಗಳಲ್ಲಿಯೇ ಷೇರುಗಳ ಮೇಲೆ 43 ಸಾವಿರ ಕೋಟಿ ರೂ.ಗಳ ಹೂಡಿಕೆಯಾಗಿದೆ. ಬಿಜೆಪಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಮೇಲುಗೈ ಸಾಧಿಸಿರುವ ರಾಜಕೀಯ ಸ್ಥಿರತೆಯ ಸಂಕೇತ ನೀಡಿದೆ. ಇದು ಅತಿ ಹೆಚ್ಚಿನ ಪ್ರಮಾಣದಲ್ಲಿ ವಿದೇಶಿ ಹೂಡಿಕೆ ಹರಿದು ಬರಲು ಕಾರಣವಾಗಿದೆ.

## ದೋಣಿ ಮುಳುಗಿ 61 ಸಾವು

**(1ನೇ ಪುಟದಿಂದ)** ಮಹಿಳೆಯರು ಹಾಗೂ ಮಕ್ಕಳೂ ಸೇರಿದ್ದಾರೆ ಎಂದು ವಿಶ್ವಸಂಸ್ಥೆಯ ವಲಸೆ ಸಂಸ್ಥೆ ಹೇಳಿದೆ.

ಗುರುವಾರ ಹಾಗೂ ಶುಕ್ರವಾರದ ನಡುವಿನ ರಾತ್ರಿಯಲ್ಲಿ ದೋಣಿ ಮುಳುಗಿದೆ. ಈ ಮಾರ್ಗದಲ್ಲಿ ಅಕ್ರಮ ವಲಸಿಗರು ದೋಣಿಗಳಲ್ಲಿ ಬರುವುದು ಸಾಮಾನ್ಯವಾಗಿದೆ. ಈ ಮಾರ್ಗ ಕಠಿಣವಾಗಿದ್ದು, ಹಡಗು ಅವಘಡಗಳಲ್ಲಿ ಸಾವಿರಾರು ಜನ ಸಾವನ್ನಪ್ಪಿದ್ದಾರೆ.

ಹಡಗಿನಲ್ಲಿ 86 ಜನರಿದ್ದರು. ಬಿರುಸಾದ ಗಾಳಿಗೆ ಸಿಲುಕಿ ದೋಣಿ ಮಗುಚಿದೆ. 61 ಜನರು ಸಾವನ್ನಪ್ಪಿದ್ದಾರೆ ಎಂದು ವಿಶ್ವ ಸಂಸ್ಥೆಯ ಅಂತರರಾಷ್ಟ್ರೀಯ ವಲಸಿಗರ ಸಂಘಟನೆ ತಿಳಿಸಿದೆ.

# ಉಪ್ಪಾರ ಸಮಾಜಕ್ಕೆ ಮೀಸಲಾತಿ ಕೊಡಿ



**(1ನೇ ಪುಟದಿಂದ)** ಕ್ಷೇತ್ರದಲ್ಲಿ ಪ್ರಗತಿ ಹೊಂದಲು ಮೀಸಲಾತಿ ಅವಶ್ಯವಿದೆ. ಸರ್ಕಾರ ಕುಲಶಾಸ್ತ್ರ ಅಧ್ಯಯನದ ವರದಿ ಸ್ವೀಕರಿಸಿ, ಚರ್ಚಿಸಿ, ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕು. ಮೀಸಲಾತಿ ಸಿಗುವವರೆಗೂ ಹೋರಾಟ, ಬೃಹತ್ ಪ್ರತಿಭಟನಾ ಸಮಾವೇಶಗಳನ್ನು ಮುಂದುವರೆಸಲಾಗುವುದು ಎಂದು ಹೇಳಿದರು.

ಉಪ್ಪಾರ ಸಮಾಜದವರು ಅನ್ಯ ಸಮಾಜದ ಮೀಸಲಾತಿ ಸೌಲಭ್ಯ ಕಬಳಿಸಲು ಹೋಗುವ ಮಾತೇ ಇಲ್ಲ. ಮುಂದಿನ ಪೀಳಿಗೆಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ಮುಂದೆ ಬರಲು ಅನುಕೂಲವಾಗುವಂತೆ ಸರ್ಕಾರ ಉಪ್ಪಾರ ಸಮಾಜಕ್ಕೆ ಸರಿಯಾದ ಮೀಸಲಾತಿ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಮೀಸಲಾತಿ ನೀಡುವ ಜೊತೆಗೆ ಸಮಾಜದ ಭಗೀರಥ ಮಹರ್ಷಿಗಳ ಪ್ರತಿಮೆ ಸ್ಥಾಪಿಸಬೇಕು. ಋಷಿಕೇಶ, ಬದರಿನಾಥ ಮಾದರಿಯಲ್ಲಿ ಗಂಗಾನದಿ ತೀರದಲ್ಲಿ ಭಗೀರಥ ಆಶ್ರಮ ಪ್ರಾರಂಭಿಸಬೇಕು. ರಾಷ್ಟ್ರಮಟ್ಟದಲ್ಲೂ ಭಗೀರಥ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಬೇಕೆಂದರು.

ಎರಡು ಕೋಟಿ ರೂ. ಅನುದಾನ ನೀಡಬೇಕು. ದೇಶದೆಲ್ಲೆಡೆ ಏಕಕಾಲಕ್ಕೆ ಭಗೀರಥ ಮಹರ್ಷಿಗಳ ಜಯಂತಿ ಆಚರಣೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಫೆ. 29 ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ 10 ಲಕ್ಷ ಜನರ ಬೃಹತ್ ಸಮಾವೇಶ ನಡೆಸಲಾಗುವುದು ಎಂದು ಶ್ರೀಗಳು ಹೇಳಿದರು.

ಮತ್ತಿ ಹನುಮಂತಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪ್ಪಾರ ಸಂಘದ ರಾಜ್ಯ ಗೌರವಾಧ್ಯಕ್ಷ ಎಸ್. ಬಸವರಾಜಪ್ಪ, ಹೆಚ್. ತಿಪ್ಪಣ್ಣ, ಪಾಲಿಕೆ ಮಾಜಿ ಮೇಯರ್ ಉಮಾ ಪ್ರಕಾಶ್, ಮಾಜಿ ಉಪ ಮೇಯರ್ ಮಂಜಮ್ಮ, ದೂಡಾ ಮಾಜಿ ಅಧ್ಯಕ್ಷ ಎ.ವೈ. ಪ್ರಕಾಶ್, ಹನುಮಂತಪ್ಪ, ಡಾ.ನಾಗರಾಜ್, ಅರ್ಜುನ್ , ಶ್ರೀನಿವಾಸಶೆಟ್ಟಿ, ಲೋಕೇಶ್, ದೊಡ್ಡಬಾತಿ ಬಿ.ಜಿ. ರೇವಣಸಿದ್ಧಪ್ಪ, ಡಾ. ಉಮೇಶ್ ಬಾಬು ಮತ್ತಿತರರು ಉಪಸ್ಥಿತರಿದ್ದರು.

## ಉತ್ತರವಿಲ್ಲದ ಪ್ರಶ್ನೆ

ಹೆಣ್ಣೇ..... ಹೆಣ್ಣೇ.... ಬಾಳಿನ ಕಣ್ಣೇ
ನಿನ್ನಯ ಪಾಲಿಗೇಕೊ ಬರೀ ಹುಣ್ಣೆ!
ಭೂರಮೆಯಂತೆ ಸಹಿಷ್ಣುತೆಯ ಶಕ್ತಿ
ಮನೆತನದಲ್ಲಿ ತುಂಬಿದ ನಿನ್ನಯ ಭಕ್ತಿ
ಬಾಳ ಬಂಡಿಯ ನೊಗವನೆಳೆಯುತ
ದಬ್ಬಾಳಿಕೆ,ದೌರ್ಜನ್ಯದೆಡೆಯಲ್ಲೂ ನೀ
ಅರಳಿ ಘಮದ ಪರಿಮಳ ಸುರಿಸಿದೆ!!
ನೆತ್ತರು ಹರಿಸಿ.......ನೋವನು ಸಹಿಸಿ
ಉಸಿರು ಸಿಡಿಸಿ.....ಉಸಿರು ತುಂಬಿದೆ
ಕುಲವ ಬೆಳಗಲು ದೀಪವ ನೀ ನೀಡಿದೆ!
ಹೆಣ್ತನಕ್ಕೆ..ಹೆಣ್ಣೇ ಶಾಪವಾಯಿತೇಕೆ!?
ಹೆಣ್ಣೆಂದು ಭ್ರೂಣವ ಹೊಸಕಿದರೇ....
ಭುವಿಯ ತುಂಬಾ ಹರಿವ ರಕ್ತದೋಕುಳಿ!
ಹೆಣ್ಣೇ ಬತ್ತಿ ಹೋಯಿತೇ ನಿನ್ನ ಕಣ್ಣೀರ ಹನಿ!
ಹೆಣ್ಣು ಭ್ರೂಣಕ್ಕೆ ಯಾಕೀ........ ಗತಿ?
ಗಂಡಿಗೆಲ್ಲಿದೆ...? ಹೆಣ್ಣಿಲ್ಲದೇ...ಅಸ್ತಿತ್ವ?
ಇದನರಿಯಲಾರದ ಮೂಢರಿವರೇ!?
ಹುಟ್ಟುವ ಮುನ್ನವೇ ಕತ್ತಲ ಕೂಪಕ್ಕೆ
ಹೆಣ್ಣು ಭ್ರೂಣವನು ಹಿಂಡಿ ಕೊಲ್ಲುವ
ದುಷ್ಟರು ಸಾಧಿಸುವುದಾದರು ಏನನ್ನು?
ಹೆಣ್ಣು ಸಿಗದೆ..ಗಂಡುಮಕ್ಕಳಿಗೆ.....
ಕೊನೆಗೆ......... ಮಹಾಭಾರತದ....
ಪಂಚ ಪಾಂಡವರ........ ಗತಿಯೇ!?

- ವೀಣಾ ಕೃಷ್ಣಮೂರ್ತಿ, ದಾವಣಗೆರೆ

## ಮಂಡನೆ ಸಾಧ್ಯತೆ

**(1ನೇ ಪುಟದಿಂದ)** ಟೆಲಿಕಾಂ ಕಂಪನಿಗಳು ಅನುಮತಿಯನ್ನು ಮರಳಿಸಿದಾಗ ಅವುಗಳ ಅನುಮತಿ, ನೋಂದಣಿ ಇತ್ಯಾದಿ ಶುಲ್ಕಗಳನ್ನು ಮರಳಿಸುವ ಬಗ್ಗೆಯೂ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

## ಶಾಲೆಯಲ್ಲಿ ಶಿಕ್ಷಕರಿಂದ ಮೊಬೈಲ್ ಬಳಕೆ ಡಿಡಿಪಿಐಗೆ ಹಕ್ಕುಗಳ ಸಮಿತಿ ದೂರು



ದಾವಣಗೆರೆ, ಡಿ.17 - ಇತ್ತೀಚಿನ ದಿನಗಳಲ್ಲಿ ಕೆಲವು ಶಾಲೆಯ ಪ್ರಾಧ್ಯಾಪಕರುಗಳು ಮಕ್ಕಳಿಗೆ ಶಿಕ್ಷಣ ನೀಡುವ ಸಂದರ್ಭದಲ್ಲಿ ಮೊಬೈಲ್ ಉಪಯೋಗಿಸುತ್ತಿದ್ದು, ಇದರಿಂದ ಮಕ್ಕಳ ಏಕಾಗ್ರತೆ ಹಾಗೂ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತಿದೆ. ಈ ಸಂಬಂಧ ಸರ್ಕಾರ ಹೊರಡಿಸಿರುವ ಆದೇಶ ಪಾಲನೆ ಆಗುತ್ತಿಲ್ಲ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ರಾಷ್ಟ್ರೀಯ ಮಾನವ ಹಕ್ಕುಗಳ ತನಿಖಾ ಸಮಿತಿ ಡಿಡಿಪಿಐಯವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ. ಈ ಸಂದರ್ಭದಲ್ಲಿ ಜಿಲ್ಲಾ ಘಟಕದ ಅಧ್ಯಕ್ಷ ಸುಧೀಂದ್ರ ಕುಮಾರ್, ಶ್ರೀಧರ್ ಟಿ, ಪೋತುಲ ಶ್ರೀನಿವಾಸ್, ಆಶಾ, ವಿನುತ ಮತ್ತಿತರರು ಹಾಜರಿದ್ದರು.

## ಉದ್ಯಮಿ ಸಜ್ಜನ್ ಜಿಂದಾಲ್ ವಿರುದ್ಧ ಅತ್ಯಾಚಾರದ ಆರೋಪ

ಮುಂಬೈ, ಡಿ. 17 – ಉದ್ಯಮಿ ಸಜ್ಜನ್ ಜಿಂದಾಲ್ ಅವರು ಮದುವೆಯಾಗುವುದಾಗಿ ಹೇಳಿ ಅತ್ಯಾಚಾರ ಎಸಗಿರುವುದಾಗಿ 30 ವರ್ಷದ ಮಹಿಳೆಯೊಬ್ಬರು ಆರೋಪಿಸಿದ್ದಾರೆ.

ನಟಿ ಎಂದು ಹೇಳಿಕೊಳ್ಳುವ 30 ವರ್ಷದ ಮಹಿಳೆಯೊಬ್ಬರು 64 ವರ್ಷದ ಜಿಂದಾಲ್ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ. ಜಿಂದಾಲ್ ಅವರು 23 ಶತಕೋಟಿ ಡಾಲರ್ ಮೌಲ್ಯದ ಜೆ.ಎಸ್. ಡಬ್ಲ್ಯೂ. ಸಮೂಹದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ.

ಕೆಲ ವರ್ಷಗಳ ಹಿಂದೆ ದುಬೈನಲ್ಲಿ ನಡೆದ ಕ್ರಿಕೆಟ್ ಪಂದ್ಯದ ವೇಳೆ ಜಿಂದಾಲ್ ಪರಿಚಯವಾಗಿತ್ತು. ಕಳೆದ ವರ್ಷ ಜನವರಿ 24ರಂದು ಜೆ.ಎಸ್.ಡಬ್ಲ್ಯೂ. ಸಮೂಹದ ಕೇಂದ್ರ ಕಚೇರಿಯಲ್ಲಿ ಲೈಂಗಿಕ ಹಲ್ಲೆ ನಡೆಸಲಾಗಿತ್ತು. ಮದುವೆ ಮಾಡಿಕೊಳ್ಳುವುದಾಗಿ ಜಿಂದಾಲ್ ಹೇಳಿದ್ದರು ಎಂದು ಮಹಿಳೆ ಹೇಳಿದ್ದಾರೆ.

ಈ ವರ್ಷ ಫೆಬ್ರವರಿ 16ರಂದು ಪೊಲೀಸರ ಬಳಿ ತೆರಳಿದ್ದೆ. ಡಿಸೆಂಬರ್ 13ರಂದು ಮುಂಬೈನ ಬಿ.ಕೆ.ಸಿ. ಪೊಲೀಸ್ ಠಾಣೆಯಲ್ಲಿ ಪೊಲೀಸರಲ್ಲಿ ಅತ್ಯಾಚಾರ ಸಂಬಂಧ ಎಫ್.ಐ.ಆರ್. ದಾಖಲಿಸಲಾಗಿದೆ ಎಂದು ಮಹಿಳೆ ಹೇಳಿದ್ದಾರೆ. ಆದರೆ, ಜಿಂದಾಲ್ ಹೇಳಿಕೆಯೊಂದನ್ನು ನೀಡಿದ್ದು ಈ ಆರೋಪ ನಿರಾಧಾರ ಎಂದಿದ್ದಾರೆ.

# ನಾಳೆ ಐ.ಎನ್.ಡಿ.ಐ.ಎ. ಸಭೆ : ಸೀಟು ಹಂಚಿಕೆಯ ಬಗ್ಗೆ ಪ್ರಮುಖ ಚರ್ಚೆ

ನವದೆಹಲಿ, ಡಿ. 17 – ಮಂಗಳವಾರ ಪ್ರತಿಪಕ್ಷಗಳ ಒಕ್ಕೂಟವಾದ ಐ.ಎನ್.ಡಿ.ಐ.ಎ.ದ ಸಭೆ ನಡೆಯಲಿದ್ದು, ಸೀಟು ಹಂಚಿಕೆಯ ಬಗ್ಗೆ ಪ್ರಮುಖವಾಗಿ ಚರ್ಚೆ ನಡೆಯಲಿದೆ. ಡಿಸೆಂಬರ್ 31ರ ಒಳಗೆ ಸೀಟುಗಳ ಹಂಚಿಕೆ ಪೂರ್ಣಗೊಳಿಸಬೇಕೆಂದು ಹಲವು ನಾಯಕರು ಬಯಸಿದ್ದಾರೆ.

2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು ಸಾಮಾನ್ಯ ಅಜೆಂಡಾ ಹೊಂದುವುದೂ ಸಹ ವಿಪಕ್ಷ ನಾಯಕರಿಗೆ ದೊಡ್ಡ ಸವಾಲಾಗಿದೆ.

ಸೀಟು ಹಂಚಿಕೆಯನ್ನು ಡಿಸೆಂಬರ್ 31ರ ಒಳಗೆ ಪೂರ್ಣಗೊಳಿಸಬೇಕು. ಇದರಿಂದ ಜಂಟಿ ಚುನಾವಣಾ ತಂತ್ರಗಾರಿಕೆ ಹಾಗೂ ಸಾಮಾನ್ಯ ಅಜೆಂಡಾವನ್ನು ಜನರ ಎದುರು ಇರಿಸಲು ಸಾಧ್ಯವಾಗಲಿದೆ ಎಂದು ಪ್ರತಿಪಕ್ಷಗಳ ಒಂದು ವರ್ಗದ ನಾಯಕರು ಹೇಳುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಒಕ್ಕೂಟಕ್ಕೆ ಸಂಚಾಲಕ, ವಕ್ತಾರ ಹಾಗೂ ಕಾರ್ಯದರ್ಶಿಯೊಬ್ಬರನ್ನು ನೇಮಿಸಬೇಕಿದೆ. ಈ ವಿಷಯವೂ ಇನ್ನೂ ಬಗೆಹರಿದಿಲ್ಲ. ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಗಳಿಸಿದ ಮುನ್ನಡೆ ವಿಪಕ್ಷಗಳ ಮೇಲಿನ ಒತ್ತಡವನ್ನು ಇನ್ನಷ್ಟು ಹೆಚ್ಚಿಸಿದೆ.

ಸಮಾಜವಾದಿ ಪಾರ್ಟಿ ಹಾಗೂ ಡಿ.ಎಂ.ಕೆ.ಗಳು ಕಾಂಗ್ರೆಸ್ ಜೊತೆಗಿನ ಸೀಟು ಹಂಚಿಕೆಯನ್ನು ಅಂತಿಮಗೊಳಿಸಿಕೊಳ್ಳುವ ಸಾಧ್ಯತೆ ಇದೆ. ಸಮಾಜವಾದಿ ಪಾರ್ಟಿಯು ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ಎಂಟು ಸೀಟು ಕೊಡಲು ಸಿದ್ಧವಿದೆ. ಆದರೆ, ಕಾಂಗ್ರೆಸ್ ಹೆಚ್ಚು ಸ್ಥಾನ ಬಯಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಆದರೆ, ಪಶ್ಚಿಮ ಬಂಗಾಳ, ಕೇರಳ , ಪಂಜಾಬ್ ಹಾಗೂ ದೆಹಲಿಗಳಲ್ಲಿ ಸೀಟು ಹಂಚಿಕೆ ಸಮಸ್ಯೆಯಾಗುತ್ತಿದೆ. ಸೀಟು ಹಂಚಿಕೆಯ ಬಗ್ಗೆ ಈ ರಾಜ್ಯಗಳಲ್ಲಿ ಒಮ್ಮತ ಏರ್ಪಡುತ್ತಿಲ್ಲ.

ಜಾತಿ ಗಣತಿ ವಿಷಯ ಸಹ ಜನರಲ್ಲಿ ಹೆಚ್ಚು ಸ್ಪಂದನೆ ಪಡೆದುಕೊಂಡಿಲ್ಲ ಎಂಬ ಭಾವನೆಯೂ ಹಲವು ನಾಯಕರಲ್ಲಿದೆ. ಹೀಗಾಗಿ ಹೊಸ ತಂತ್ರಗಾರಿಕೆಗಾಗಿ ನಾಯಕರು ಚರ್ಚೆ ನಡೆಸುವ ಸಾಧ್ಯತೆ ಇದೆ.

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೇರಿದಂತೆ ಹಲವು ಪಕ್ಷಗಳು ಜಾತಿ ಗಣತಿಯನ್ನು ಪ್ರಮುಖ ವಿಷಯವಾಗಿ ಪ್ರಸ್ತಾಪಿಸಿದ್ದವು. ಆದರೆ, ಚುನಾವಣೆಯಲ್ಲಿ ನಿರೀಕ್ಷಿತ ಫಲಿತಾಂಶ ದೊರೆತಿರಲಿಲ್ಲ.

ಅಲ್ಲದೇ ಜಂಟಿಯಾಗಿ ಸಮಾವೇಶಗಳನ್ನು ನಡೆಸುವ ಬಗ್ಗೆ ಯೋಜನೆಯನ್ನೂ ರೂಪಿಸಬೇಕಿದೆ. ಈ ಹಿಂದೆ ಅಕ್ಟೋಬರ್ ತಿಂಗಳಲ್ಲಿ ಐ.ಎನ್.ಡಿ.ಐ.ಎ. ಸಭೆ ನಡೆಸಲು ಸಾಧ್ಯವಾಗದೇ ಈ ವಿಷಯ ಬಾಕಿ ಉಳಿದಿದೆ ಎಂದು ಮೂಲಗಳು ತಿಳಿಸಿವೆ.

ಹಿಂದಿ ಭಾಷಿಗರ ನಾಡಿನಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಸೋತಿರುವುದು, ವಿಪಕ್ಷಗಳ ಮೈತ್ರಿಕೂಟದಲ್ಲಿ ಸ್ಥಾನಮಾನಗಳು ಬದಲಾಗುವಂತೆ ಮಾಡಿದೆ. ಕಾಂಗ್ರೆಸ್ ಹೊಂದಿರುವ ಪ್ರಾಬಲ್ಯವನ್ನು ಇತರೆ ಪಕ್ಷಗಳು ಪ್ರಶ್ನಿಸುವ ಸಾಧ್ಯತೆಯೂ ಇದೆ.

2024ರ ಲೋಕಸಭಾ ಚುನಾವಣೆಗೆ ಈಗ ಕೆಲವೇ ತಿಂಗಳು ಬಾಕಿ ಉಳಿದಿದೆ. ಚುನಾವಣಾ ಪ್ರಚಾರದ ವಿಷಯಗಳನ್ನು ಬದಲಿಸಲು ವಿಪಕ್ಷಗಳಿಗೆ ಈಗ ಹೆಚ್ಚು ಸಮಯ ಉಳಿದಿಲ್ಲ. ಈ ಹಿನ್ನೆಲೆಯಲ್ಲಿ ಐ.ಎನ್.ಡಿ.ಐ.ಎ.ದ ಮಂಗಳವಾರದ ಸಭೆ ಪ್ರಾಮುಖ್ಯತೆ ಪಡೆದುಕೊಂಡಿದೆ.

## ಅರ್ಚಕರ ವೃತ್ತಿ ಶಿಕ್ಷಣ ತರಬೇತಿ

ನಾಗಮಂಗಲ, ಡಿ.17- ತಾಲ್ಲೂಕಿನ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಶ್ರೀ ಕಾಲ ಭೈರವೇಶ್ವರ ಸಂಸ್ಕೃತ ವೇದ ಆಗಮ ಮಹಾವಿದ್ಯಾಲಯದ ಆಶ್ರಯದಲ್ಲಿ ನಾಳೆ ದಿನಾಂಕ 18 ರಿಂದ 28 ರವರೆಗೆ ರಾಜ್ಯ ಮಟ್ಟದ 15ನೇ ಅರ್ಚಕರ ವೃತ್ತಿ ಶಿಕ್ಷಣ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿರುವ ವಿವಿಧ ದೇವಾಲಯಗಳ ಅರ್ಚಕರುಗಳಿಗೆ ಹಾಗೂ ಅರ್ಚಕರಾಗಲು ಬಯಸುವವರಿಗೆ, ಧಾರ್ಮಿಕ ದತ್ತಿ ಇಲಾಖೆ ಸಹಯೋಗದ ಈ ಶಿಬಿರದಲ್ಲಿ ಯಾವುದೇ ಜಾತಿ, ಮತ ಭೇದವಿಲ್ಲದೆ ಎಲ್ಲಾ ಆಗಮದವರೂ ಭಾಗವಹಿಸಬಹುದು. ಆಗಮ ಶಾಸ್ತ್ರೋಕ್ತ ಪೂಜಾ ಕ್ರಮ, ಪಂಚಾಂಗ ಶ್ರವಣ, ವಿವಾ ಹಾದಿ ಶುಭ ಕಾರ್ಯಗಳಿಗೆ ಮುಹೂರ್ತ ಇತ್ಯಾದಿಗಳನ್ನು ಕಲಿಸಲಾಗುವುದು.

ಆಸಕ್ತರು, ಡಾ.ಶ್ರೀಕಾಂತ ಪುರೋಹಿತ ಪ್ರಾಚಾರ್ಯರು, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ, ಆಗಮ ಮಹಾವಿದ್ಯಾಲಯ, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ - 571 811. ಮೊ.94814 92311. ನೋಂದಾಯಿಸಿ ಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : 7899607523, 98869 58585, 9535601859.

# ಇಂದಿನಿಂದ 'ವಿನಯ್ ನಡಿಗೆ ಹಳ್ಳಿ ಕಡೆಗೆ' ಬೃಹತ್ ಪಾದಯಾತ್ರೆ, ಗ್ರಾಮ ವಾಸ್ತವ್ಯ

ಜಗಳೂರು, ಡಿ.17 - ವಿನಯ ಮಾರ್ಗ ಟ್ರಸ್ಟ್ ವತಿಯಿಂದ ನಾಳೆ ದಿನಾಂಕ 18 ರ ಸೋಮವಾರದಿಂದ ಬರುವ ಜನವರಿ 12 ರವರೆಗೆ 25 ದಿನಗಳ ಕಾಲ ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಎಂಟು ವಿಧಾನಸಭಾ ಕ್ಷೇತ್ರಗಳ ಹಳ್ಳಿಗಳಲ್ಲಿ 'ವಿನಯ್ ನಡಿಗೆ ಹಳ್ಳಿ ಕಡೆಗೆ' ಎಂಬ ವಿನೂತನ ಬೃಹತ್ ಪಾದಯಾತ್ರೆ, ಗ್ರಾಮ ವಾಸ್ತವ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಪ್ರಬಲ ಟಿಕೆಟ್ ಆಕಾಂಕ್ಷಿ ವಿನಯ್‌ಕುಮಾರ್ ಜಿ.ಬಿ. ತಿಳಿಸಿದ್ದಾರೆ.



ಪಟ್ಟಣದ ಪತ್ರಕರ್ತರ ಭವನದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾಳೆ ಸೋಮವಾರ ಜಗಳೂರು ವಿಧಾನಸಭಾ ಕ್ಷೇತ್ರದ ಗಡಿ ಭಾಗವಾದ ಚಿಕ್ಕಉಜ್ಜನಿ ಗ್ರಾಮದಿಂದ ಬೆಳಿಗ್ಗೆ 9 ಗಂಟೆಗೆ ಪಾದಯಾತ್ರೆ ಪ್ರಾರಂಭವಾಗಲಿದೆ ಎಂದರು.

ಪಾದಯಾತ್ರೆ ಪ್ರಾರಂಭದ ದಿನದಿಂದ ಮುಕ್ತಾಯದವರೆಗೆ ಪ್ರತಿನಿತ್ಯ ವಾಸ್ತವ್ಯ ಮಾಡುವ ಹಳ್ಳಿಗಳಲ್ಲಿ ಆ ಗ್ರಾಮದ ಜನರೊಂದಿಗೆ ಗ್ರಾಮಗಳ ಮೂಲಭೂತ ಸಮಸ್ಯೆಗಳು, ಕ್ಷೇತ್ರದ ಅಭಿವೃದ್ಧಿ ಕುರಿತು ಸಮಾಲೋಚನೆ, ಸ್ಥಳೀಯ ಸಮಸ್ಯೆಗಳ ಬಗ್ಗೆ ಮನವರಿಕೆ ಮಾಡಿ, ಸಮಸ್ಯೆಗಳನ್ನು ಸಾಧ್ಯವಾದಷ್ಟು ಸ್ಥಳದಲ್ಲೇ ಬಗೆಹರಿಸುವ ಪ್ರಯತ್ನ ಮಾಡುವೆ. ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳೊಂದಿಗೆ ಯು.ಪಿ.ಎಸ್ಸಿ., ಕೆ.ಪಿ.ಎಸ್ಸಿ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷಾ ಮಾರ್ಗದರ್ಶಿ ಕಾರ್ಯಾಗಾರಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳಿಗೆ ಮನೋಸ್ಥೈರ್ಯ ತುಂಬಿ 'ಪದವಿ ನಂತರ ಮುಂದೇನು' ಹಾಗೂ 'ಎಸ್.ಎಸ್.ಎಲ್.ಸಿ. ಆದ ನಂತರ' ಮುಂದೇನು? ಎಂಬ ವಿಚಾರಗಳನ್ನು ಆಯಾ ಗ್ರಾಮಗಳ ವಾಸ್ತವ್ಯಗಳಲ್ಲಿ ಸಂವಾದ ನಡೆಸಲಾಗುವುದು ಎಂದು ವಿನಯ್ ಕುಮಾರ್ ತಿಳಿಸಿದರು.

ನಾಳೆ ದಿನಾಂಕ 18 ರಂದು ಚಿಕ್ಕಉಜ್ಜಿನಿ, ಗಡಿಮಾಕುಂಟೆ, ಲಕ್ಕಂಪುರ, ಗೌರಿಪುರ, ಕ್ಯಾಸೇನಹಳ್ಳಿ, ಗೌಡಗೊಂಡನಹಳ್ಳಿ ನಂತರ ತಮಲೇಹಳ್ಳಿಯಲ್ಲಿ ಗ್ರಾಮ ವಾಸ್ತವ್ಯ ಮಾಡಲಾಗುವುದು. ನಾಡಿದ್ದು ದಿನಾಂಕ 19 ರಂದು ಹನುಮಂತಾಪುರ ಗೊಲ್ಲರಹಟ್ಟಿ, ಹನುಮಂತಾಪುರ, ಕಸವನಹಳ್ಳಿ, ಗೋಗುದ್ದು, ಉದ್ದಗಟ್ಟೆ, ಜಗಳೂರು ಗೊಲ್ಲರಹಟ್ಟಿ, ಮರೇನಹಳ್ಳಿ, ಜಮ್ಮಾಪುರ, ನಂತರ ರಾತ್ರಿ ಜಮ್ಮಾಪುರ ಗೊಲ್ಲರಹಟ್ಟಿ ಗ್ರಾಮದಲ್ಲಿ ಗ್ರಾಮ ವಾಸ್ತವ್ಯ.

ಡಿ.20 ರಂದು ತೋರಣಗಟ್ಟೆ, ಕಟ್ಟಿಗೆಹಳ್ಳಿ, ನಿಬಗೂರು, ಬಿದರಕೆರೆ, ರಸ್ತೆಮಾಕುಂಟೆ, ಬಿದರಕೆರೆಗೊಲ್ಲರಹಟ್ಟಿ, ಕೊರಟಿಕೆರೆ ತಾಂಡಾ, ಕೊರಟಿಕೆರೆ, ಮೆದಗಿನಕೆರೆ ನಂತರ ದೇವಿಕೆರೆಯಲ್ಲಿ ಗ್ರಾಮ ವಾಸ್ತವ್ಯ. ಡಿ.21 ರಂದು ದೇವಿಕೆರೆ, ಸೂರಡ್ಡಿಹಳ್ಳಿ, ಮಿನಿಗರಹಳ್ಳಿ, ಪಾಲನಾಯಕನ ಕೋಟೆ, ಕಲ್ಲಹಳ್ಳಿ, ಪಲ್ಲಾಗಟ್ಟೆ, ದಿದ್ದಿಗಿ, ಅಸಗೋಡು, ರಾಮಘಟ್ಟ ತಾಂಡಾ, ರಾಮಘಟ್ಟ ತಾಂಡಾ-2, ರಾಮಘಟ್ಟ ಗ್ರಾಮದಲ್ಲಿ ಗ್ರಾಮ ವಾಸ್ತವ್ಯ. ಡಿ.22 ರಂದು ರಾಮಘಟ್ಟ ಗ್ರಾಮ, ಚಟ್ನಿಹಳ್ಳಿ, ಉಚ್ಚಂಗಿದುರ್ಗ, ಕಂಬತ್ತಹಳ್ಳಿ ಕ್ರಾಸ್, ಅರಸಿಕೆರೆ, ಕಡಬಗೆರೆ, ಸಾಸ್ವೆಹಳ್ಳಿ ಗ್ರಾಮದಲ್ಲಿ ವಾಸ್ತವ್ಯ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಬದ್ರಿ, ನಾಗರಾಜು, ಶ್ರೀನಿವಾಸ್, ಮಲ್ಲಿಕಾರ್ಜುನ್, ಕಿರಣ್, ಧನ್ಯಕುಮಾರ್, ನಾಗಣ್ಣ, ಶರತ್ ಸೇರಿದಂತೆ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ದಾವಣಗೆರೆಯನ್ನು 2ನೇ ರಾಜಧಾನಿಯನ್ನಾಗಿ ಘೋಷಿಸಲಿ



ದಾವಣಗೆರೆ, ಡಿ. 17- ಕರ್ನಾಟಕದ ಕೇಂದ್ರ ಬಿಂದು ದಾವಣಗೆರೆಯನ್ನು ಎರಡನೇ ರಾಜಧಾನಿಯನ್ನಾಗಿ ಘೋಷಿಸುವಂತೆ ಚಿತ್ರದುರ್ಗ ಮುರುಘಾ ಮಠದ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ ಸರ್ಕಾರವನ್ನು ಒತ್ತಾಯಿಸಿದರು.

ನಗರದ ಶಿವಯೋಗಾಶ್ರಮದ ಆವರಣದಲ್ಲಿ ವಿಶ್ವ ಕರ್ನಾಟಕ ರಕ್ಷಣಾ ವೇದಿಕೆಯಿಂದ ಇಂದು ಸಂಜೆ ಹಮ್ಮಿಕೊಂಡಿದ್ದ 68 ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಬೆಂಗಳೂರು ರಾಜಧಾನಿಯಾಗಿರುವುದರಿಂದ ಅನ್ಯ ಭಾಷಿಕರ ಹಾವಳಿ ಹೆಚ್ಚಾಗಿದೆ. ಕ್ರಮೇಣವಾಗಿ ಕನ್ನಡ ಭಾಷೆ ನಶಿಸಿ ಹೋಗುವ ಆತಂಕ ಮೂಡುತ್ತಿದೆ. ದಾವಣಗೆರೆಯನ್ನು ರಾಜಧಾನಿಯನ್ನಾಗಿ ಮಾಡಿದ್ದರೆ ಕನ್ನಡದ ಹೋರಾಟ ಮಾಡುವ ಪ್ರಮೇಯವೇ ಇರುತ್ತಿರಲಿಲ್ಲ ಎಂದರು.

ದಾವಣಗೆರೆಯಲ್ಲಿಯೇ ಅತಿ ಹೆಚ್ಚು ಕನ್ನಡ ಬಳಕೆ ಮಾಡುತ್ತಿರುವುದನ್ನು ಮನಗಾಣಬೇಕು. ದಾವಣಗೆರೆಯನ್ನು ರಾಜಧಾನಿಯನ್ನಾಗಿ ಮಾಡುವುದೇ ಸೂಕ್ತ ಎಂದು ಶ್ರೀಗಳು ಹೇಳಿದರು.

ದಾವಣಗೆರೆ ಜಿಲ್ಲೆಯಲ್ಲಿ ಪ್ರಾಕೃತಿಕ ಸಂಪನ್ಮೂಲಗಳಿವೆ. ಭದ್ರಾ ಜಲಾಶಯ ಸಮೀಪದಲ್ಲಿದೆ. ಹೊನ್ನಾಳಿ ಬಳಿ ಜಲಾಶಯ ನಿರ್ಮಾಣ ಮಾಡಿದರೆ ನೀರಾವರಿಯನ್ನು ಒಳಗೊಂಡಂತೆ ರೈತರು ಸೇರಿದಂತೆ ಎಲ್ಲರಿಗೂ ಅನುಕೂಲವಾಗಲಿದೆ ಎಂದರು.

ಪ್ರತಿಯೊಬ್ಬ ಕನ್ನಡಿಗನೂ ಕನ್ನಡ ಉಳಿಸಿ, ಬೆಳೆಸುವ ಕೆಲಸವನ್ನು ಮಾಡಬೇಕು. ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿದವರು ಉನ್ನತ ಹುದ್ದೆಗಳಲ್ಲಿದ್ದಾರೆ. ಪೋಷಕರು ಲಕ್ಷಾಂತರ ಹಣ ವ್ಯಯಿಸಿ ಆಂಗ್ಲ ಮಾಧ್ಯಮದಲ್ಲಿ ಮಕ್ಕಳನ್ನು ಓದಿಸುವುದು ಹೆಚ್ಚಾಗಿ ಕಂಡು ಬರುತ್ತದೆ ಎಂದು ಹೇಳಿದರು.

ಜಗಳೂರಿನ ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಕೆ.ಜಿ. ಯಲ್ಲಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮಹಾನಗರ ಪಾಲಿಕೆ ಸದಸ್ಯ ಅಬ್ದುಲ್ ಲತೀಫ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ಹೆಚ್.ಜೆ. ಮೈನುದ್ದೀನ್, ದೇವರಮನಿ ಶಿವರಾಜ್, ಪತ್ರಕರ್ತರಾದ ನಾಗರಾಜ್ ಬಡದಾಳ್ ಮತ್ತಿತರರಿದ್ದರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು. ಹಾಸ್ಯ ಕಲಾವಿದ ಕೋಗಳಿ ಕೊಟ್ರೇಶ್ ಹಾಸ್ಯ ಕಾರ್ಯಕ್ರಮ ನಡೆಸಿಕೊಟ್ಟರು.

# ಹರಿಹರ : ನಂದಿಗಾವಿ ಶ್ರೀನಿವಾಸ್ ಹುಟ್ಟುಹಬ್ಬ ಆಚರಣೆಗೆ ಸಿದ್ಧತೆ




ಹರಿಹರ, ಡಿ,17 - ಇದೇ ದಿನಾಂಕ 21 ರಂದು ಕಾಂಗ್ರೆಸ್ ಪಕ್ಷದ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರ ಹುಟ್ಟು ಹಬ್ಬವನ್ನು ಸರಳವಾಗಿ ಆಚರಿಸಲು ನಂದಿಗಾವಿ ಶ್ರೀನಿವಾಸ್ ಸ್ನೇಹ ಬಳಗ ನಿರ್ಧರಿಸಿದೆ ಎಂದು ನಗರಸಭೆ ಸದಸ್ಯ ಕೆ.ಜಿ. ಸಿದ್ದೇಶ್ ತಿಳಿಸಿದ್ದಾರೆ.

ನಗರದ ಪತ್ರಿಕಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ರಾಜ್ಯದಲ್ಲಿ ಭೀಕರ ಬರಗಾಲದ ಜೊತೆಗೆ ತಾಲ್ಲೂಕಿನಲ್ಲೂ ಕೂಡ ಹೆಚ್ಚಿನ ಪ್ರಮಾಣದಲ್ಲಿ ಬರಗಾಲ ಇರುವುದರಿಂದ ಹುಟ್ಟು ಹಬ್ಬವನ್ನು ಆಡಂಬರದ ಕಾರ್ಯಕ್ರಮ ಹಮ್ಮಿಕೊಳ್ಳದೆ ಸರಳವಾಗಿ ಆಚರಿಸಲಾಗುತ್ತಿದೆ ಎಂದರು.

ಇದೇ ದಿನಾಂಕ 21 ರಂದು ಬೆಳಗ್ಗೆ 11 ಗಂಟೆಗೆ ಸ್ನೇಹ ಬಳಗದ ವತಿಯಿಂದ ಹರಿಹರ ಮತ್ತು ಮಲೇಬೆನ್ನೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಾಲು, ಹಣ್ಣು, ಹಂಪಲು ವಿತರಣೆ ಮಾಡಲಾಗುತ್ತದೆ. ನಗರದ ಗಾಂಧಿ ಮೈದಾನದಲ್ಲಿ 28 ಜೊತೆ ಕುಸ್ತಿ ಪಂದ್ಯವನ್ನು ಏರ್ಪಡಿಸಲಾಗಿದೆ. ಆ ಸಮಯದಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಹಾರ, ಶಾಲು, ಪೇಟ ಮತ್ತು ಕೇಕ್ ತೆಗೆದುಕೊಂಡು ಬರದೇ ಶುಭಾಶಯಗಳನ್ನು ತಿಳಿಸುವುದಕ್ಕೆ ಅವಕಾಶ ಮಾಡಿಕೊಡಲಾಗುವುದು. ಅಭಿಮಾನಿಗಳಿಗೆ ಉಪಹಾರ ವ್ಯವಸ್ಥೆ ಮಾಡಲಾಗಿದೆ. ಯುವ ಬ್ರಿಗೇಡ್ ವತಿಯಿಂದ ಹೆಚ್.ಐ.ವಿ. ಕಾಯಿಲೆಯನ್ನು ಹೊಂದಿರುವ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ, ಊಟದ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಎಂ.ಎಸ್. ಬಾಬುಲಾಲ್, ಮಲ್ಲೇಶ್ ಕಮಲಪುರ, ಕಿರಣ್ ಭೂತೆ, ಸಂತೋಷ ನೋಟದರ್, ಮಂಜುನಾಥ್ ಹಳ್ಳಳ್ಳಿ, ತಿಪ್ಪೇಸ್ವಾಮಿ, ಭರತ್, ಸಂತೋಷ್ ಇತರರು ಹಾಜರಿದ್ದರು.

## ನಗರದ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ಕಾರ್ತಿಕೋತ್ಸವ



ವಿನೋಬನಗರ 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆಯ ಹತ್ತಿರವಿರುವ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಕಾರ್ತಿಕೋತ್ಸವದ ಅಂಗವಾಗಿ ಬೆಳಿಗ್ಗೆ 6 ಗಂಟೆಗೆ ರುದ್ರಾಭಿಷೇಕ ಮತ್ತು ಪಂಚಾಮೃತ ಅಭಿಷೇಕ ನಡೆಸಲಾಗುವುದು. ಸಂಜೆ 6 ಗಂಟೆಗೆ ಕಾರ್ತಿಕೋತ್ಸವ ನಡೆಯಲಿದೆ.

ಪಾಲಿಕೆ ಸದಸ್ಯ ಎ. ನಾಗರಾಜ್, ಮಾಜಿ ಮಹಾಪೌರರಾದ ಶ್ರೀಮತಿ ರೇಖಾ ನಾಗರಾಜ್, ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಕಾರ್ತಿಕೋತ್ಸವವನ್ನು ನೆರವೇರಿಸುವರು.

## ನಾಳೆ ಶ್ರೀ ಮಹಾ ಗಣಪತಿ ಮತ್ತು ಶ್ರೀ ವೀರಭದ್ರೇಶ್ವರ ಸ್ವಾಮಿ ಕಡೇ ಕಾರ್ತಿಕ



ದಾವಣಗೆರೆ, ಡಿ.17- ಶಾಮನೂರು ರಸ್ತೆಯ ಶ್ರೀ ಮಹಾಗಣಪತಿ ಮತ್ತು ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ ದಿನಾಂಕ 19ರ ಮಂಗಳವಾರ ಸಂಜೆ 8 ಗಂಟೆಗೆ ಕಡೇ ಕಾರ್ತಿಕೋತ್ಸವ ನೆರವೇರಿಸಲಾಗುವುದು. ಅಂದು ಸ್ವಾಮಿಗೆ ವಿಶೇಷ ಬಾಳೆ ದಿಂಡಿನ ಅಲಂಕಾರ ಮಾಡಲಾಗುವುದು ಎಂದು ದೇವಸ್ಥಾನದ ಪ್ರಧಾನ ಅರ್ಚಕರಾದ ವೀರಯ್ಯ ತಿಳಿಸಿದ್ದಾರೆ.



## ನಾಗರಸನಹಳ್ಳಿಯಲ್ಲಿ ನಾಳೆ ಶ್ರೀ ವೀರಭದ್ರೇಶ್ವರ ಸ್ವಾಮಿ ಕಾರ್ತಿಕೋತ್ಸವ

ದಾವಣಗೆರೆ, ಡಿ. 17 - ತಾಲ್ಲೂಕಿನ ನಾಗರಸನಹಳ್ಳಿಯಲ್ಲಿ ನಾಳೆ ರಾತ್ರಿ 10 ಗಂಟೆಗೆ ಶ್ರೀ ವೀರಭದ್ರೇಶ್ವರ ಸ್ವಾಮಿ ಕಾರ್ತಿಕೋತ್ಸವ ನೆರವೇರಲಿದೆ ಎಂದು ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಕಮಿಟಿ ತಿಳಿಸಿದೆ.

## ನಗರದಲ್ಲಿ ಇಂದು ಶ್ರೀ ಸುಬ್ರಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಚಂಪಾಷಷ್ಠಿ ಉತ್ಸವ

ಲೋಕಿಕೆರೆ ರಸ್ತೆ, ಎಸ್.ಎ. ರವೀಂದ್ರನಾಥ್ ಬಡಾವಣೆಯಲ್ಲಿರುವ ಸುಬ್ರಮಣ್ಯ ನಗರದ ಶ್ರೀ ಸುಬ್ರಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ 6 ಗಂಟೆಯಿಂದ ಶ್ರೀ ಸುಬ್ರಮಣ್ಯ ಸ್ವಾಮಿ ಚಂಪಾ ಷಷ್ಠಿ ಮಹೋತ್ಸವ ಜರುಗಲಿದೆ. ಅಲ್ಲದೇ ಶ್ರೀ ಸ್ವಾಮಿಗೆ ವಿಶೇಷ ಅಭಿಷೇಕ, ಅರ್ಚನೆ ಮತ್ತು ವಿಶೇಷ ಪೂಜಾ ಕಾರ್ಯಕ್ರಮ, ನಂತರ ಪ್ರಸಾದ ವಿನಿಯೋಗವಿರುತ್ತದೆ.

## ಜಗಳೂರಿನಲ್ಲಿ ನಾಳೆ ಲೋಕಾಯುಕ್ತರಿಂದ ಅಹವಾಲು ಸ್ವೀಕಾರ

ಜಗಳೂರು, ಡಿ.17- ದಾವಣಗೆರೆ ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್ ಕೌಲಾಪೂರೆ ಅವರು, ಜಗಳೂರು ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರ ಅಧ್ಯಕ್ಷತೆಯಲ್ಲಿ ನಾಡಿದ್ದು ದಿನಾಂಕ 19 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ರವರೆಗೆ ಸಾರ್ವಜನಿಕರ ಅಹವಾಲು ಸ್ವೀಕರಿಸುವರು. ಸಾರ್ವಜನಿಕರು ವಿವಿಧ ಇಲಾಖೆಗಳಿಗೆ ಸಲ್ಲಿಸಿದ ಅರ್ಜಿಗಳನ್ನು ವಿಲೇ ಮಾಡದೇ ಬಾಕಿ ಇಟ್ಟಿದಲ್ಲಿ ಅಂತಹ ದೂರುಗಳನ್ನು ಸಲ್ಲಿಸಬಹುದೆಂದು ತಿಳಿಸಿದ್ದಾರೆ.

## ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಟಿಕೆಟ್‌ಗಾಗಿ ಡಿ. ಬಸವರಾಜ್ ಅರ್ಜಿ



ದಾವಣಗೆರೆ, ಡಿ.17- ಚಿತ್ರದುರ್ಗ ಲೋಕಸಭಾ ಮೀಸಲು ಕ್ಷೇತ್ರಕ್ಕೆ ವೀಕ್ಷಕರಾಗಿ ನಿನ್ನೆ ಆಗಮಿಸಿದ್ದ ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹಾದೇವಪ್ಪ ಅವರಿಗೆ ಕೆಪಿಸಿಸಿ ವಕ್ತಾರರು ಹಾಗೂ ರೇಷ್ಮೆ ನಿಗಮದ ಮಾಜಿ ಅಧ್ಯಕ್ಷ ಬಸವರಾಜ್ ಅವರು ತಮಗೆ ಚಿತ್ರದುರ್ಗ ಲೋಕಸಭಾ ಮೀಸಲು ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ನೀಡಬೇಕೆಂದು ಮನವಿ ಸಲ್ಲಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್.ಚಂದ್ರಪ್ಪ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ.ತಾಜ್ ಪೀರ್, ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಹಾಲಸ್ವಾಮಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರುಗಳಾದ ಹರಪನಹಳ್ಳಿ ಎಂ.ವಿ.ಅಂಜಿನಪ್ಪ, ರಾಜು ಗೊಂಗಡಿ, ದಾದಾಪೀರ್ ಲಾಟಿ, ಟಿ.ವೀರೇಶ್, ಹೆಚ್.ತಿಪ್ಪೇಸ್ವಾಮಿ, ಟಿ.ಶಿವಕುಮಾರ್, ಬಿ.ಹೆಚ್. ಉದಯ್ ಕುಮಾರ್, ಡಿ.ಶಿವಕುಮಾರ್, ಗಿರಿಧರ್ ಸತಾಲ್, ಬಿ.ಎಸ್. ಸುರೇಶ್, ಮುಬಾರಕ್ ಸೇರಿದಂತೆ ಇತರರು ಡಿ. ಬಸವರಾಜ್ ಅವರೊಂದಿಗೆ ಹಾಜರಿದ್ದರು.

## ನಗರದಲ್ಲಿ ನಾಳೆ ಕದಳಿ ಮಹಿಳಾ ವೇದಿಕೆಯ ಸಭೆ

ದಾವಣಗೆರೆ, ಡಿ. 17- ಕದಳಿ ಮಹಿಳಾ ವೇದಿಕೆಯಿಂದ ನಾಡಿದ್ದು ದಿನಾಂಕ 19ರ ಮಂಗಳವಾರ ಬೆಳಿಗ್ಗೆ ನಡೆಯುವ 149ನೇ ಕಮ್ಮಟದಲ್ಲಿ ಸರ್ವ ಸದಸ್ಯರ ಸಾಮಾನ್ಯ ಸಭೆ, ದತ್ತಿ ಉಪನ್ಯಾಸ, ಶರಣ ಒಕ್ಕಲಿಗ ಮುದ್ದಣ್ಣ ಮತ್ತು ಶರಣ ಮಾದಾರ ಚೆನ್ನಯ್ಯ ಸ್ಮರಣೆ, ಗೌರವಾರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ನಗರದ ಶಾಮನೂರು ಶಿವಶಂಕರಪ್ಪ ಸಭಾಭವನದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಕದಳಿ ಮಹಿಳಾ ವೇದಿಕೆಯ ಸಲಹಾ ಸಮಿತಿಯ ಸದಸ್ಯರಾದ ಶ್ರೀಮತಿ ಉಮಾ ವೀರಭದ್ರಪ್ಪ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಲಿಂ. ಪಟೇಲ್ ಜಿ. ಜಯಪ್ಪ ಮತ್ತು ಶ್ರೀಮತಿ ಸುಂದರಮ್ಮ ಜಯಪ್ಪ ಇವರ ದತ್ತಿ ಕಾರ್ಯಕ್ರಮ ನಡೆಯಲಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಓ.ಜಿ ಕಾಲೋನಿ ಎ, ಬಿ ಮತ್ತು ಸಿ ಬ್ಲಾಕ್, ಬುದ್ಧ, ಬಸವ, ಭೀಮ ನಗರ, ಕರ್ನಾಟಕ ಬೀಜ ನಿಗಮ ಹಾಗೂ ಸುತ್ತಮತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಕೊರೊನಾ ರೂಪಾಂತರಿ ಕಳವಳಕಾರಿಯಲ್ಲ : ಆರೋಗ್ಯ ಸಚಿವೆ

ತಿರುವನಂತಪುರಂ, ಡಿ. 17 – ಕೇರಳದಲ್ಲಿ ಪತ್ತೆಯಾಗಿರುವ ಜೆಎನ್.1 ಕೊರೊನಾ ಉಪ ರೂಪಾಂತರಿ ಕಳವಳಕಾರಿಯಲ್ಲ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಹೇಳಿದ್ದಾರೆ.

ಪ್ರಸಕ್ತ ನಡೆಸಲಾಗುತ್ತಿರುವ ನಿಗಾ ಚಟುವಟಿಕೆಯ ವೇಳೆ ಈ ರೂಪಾಂತರಿ ಪತ್ತೆ ಮಾಡಲಾಗಿದೆ. ತಿಂಗಳ ಹಿಂದೆಯೇ ಸಿಂಗಪುರ ವಿಮಾನ ನಿಲ್ದಾಣದಲ್ಲಿ ತಪಾಸಣೆ ಮಾಡಿದಾಗ ರೂಪಾಂತರಿ ಪತ್ತೆಯಾಗಿತ್ತು ಎಂದು ಸಚಿವೆ ತಿಳಿಸಿದ್ದಾರೆ.

ತಿಂಗಳಿನಿಂದಲೂ ಈ ರೂಪಾಂತರಿ ಇದೆ. ಕೇರಳದಲ್ಲಿ ಕೇವಲ ಪತ್ತೆ ಮಾಡಲಾಗಿದೆ. ಚಿಂತೆಗೆ ಕಾರಣವಿಲ್ಲ. ಈ ಪರಿಸ್ಥಿತಿಯ ಮೇಲೆ ನಿಗಾ ವಹಿಸಲಾಗಿದೆ ಎಂದವರು ಹೇಳಿದರು.

## ಚಟುಕು

ಹೆಣ್ಣು ಭ್ರೂಣ ಹತ್ಯಾ ದೋಷವು
ತರವುದದು ಮಹಾ ಪಾಪವು
ತಟ್ಟದಿರದೇ ಅದರ ಶಾಪವು..
ಆದರೂ ನಡೆಯುತ್ತಿದೆ ನಿತ್ಯವೂ

- ವೀಣಾ ಕೃಷ್ಣಮೂರ್ತಿ, ದಾವಣಗೆರೆ

## ಲಿಟ್ಲ್ ಚಾಂಪ್ಸ್ ಶಾಲೆಯಲ್ಲಿ ಬೆಂಕಿ ರಹಿತ ಆಹಾರ ತಯಾರಿಕೆ, ಮಕ್ಕಳ ಸಂತೆ



ದಾವಣಗೆರೆ, ಡಿ. 17 - ನಗರದ ಡಿಸಿಎಂ ಟೌನ್‌ಶಿಪ್‌ನಲ್ಲಿರುವ ಲಿಟ್ಲ್ ಚಾಂಪ್ಸ್ ಶಾಲೆಯಲ್ಲಿ ಮಕ್ಕಳಿಗಾಗಿ ಬೆಂಕಿ ರಹಿತ ಆಹಾರ ತಯಾರಿಕೆ ಹಾಗೂ ಮಕ್ಕಳ ಸಂತೆ ಕಾರ್ಯಕ್ರಮ ನಡೆಯಿತು.

ಮಕ್ಕಳು ಬೆಂಕಿ ರಹಿತವಾಗಿ ವಿವಿಧ ರೀತಿಯ ತಿಂಡಿ-ತಿನಿಸುಗಳನ್ನು ತಯಾರಿಸಿ ಪ್ರದರ್ಶಿಸಿದರು. ವಿವಿಧ ಮಕ್ಕಳು ಹಲವಾರು ರೀತಿ ತರಕಾರಿಗಳನ್ನು, ಸೊಪ್ಪುಗಳನ್ನು, ಹಣ್ಣುಗಳನ್ನು, ವಿವಿಧ ರೀತಿ ದಿನಸಿ ಸಾಮಾನುಗಳನ್ನು ಮಾರಾಟ ಮಾಡುವ ಸಂತೆಯ ಚಿತ್ರಣವನ್ನು ಪ್ರದರ್ಶಿಸಿದರು.

ಈ ಕಾರ್ಯಕ್ರಮವನ್ನು ವೀಕ್ಷಿಸಲು ಸುತ್ತ-ಮುತ್ತಲಿನ ವಿವಿಧ ಶಾಲೆಯ ಮಕ್ಕಳು ಹಾಗೂ ಸಾರ್ವಜನಿಕರು ಬಂದು ವೀಕ್ಷಿಸಿ, ಮಕ್ಕಳ ಹಾಗೂ ಶಾಲೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಕಾರ್ಯದರ್ಶಿ ವಿಜಯಕುಮಾರ್, ಖಜಾಂಚಿ ಕಿರಣ್‌ಕುಮಾರ್, ನಿರ್ದೇಶಕ ಶ್ರೀಮತಿ ಸಹನಾ, ಸ್ನೇಹ, ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕಿಯರುಗಳಾದ ನಾಗವೇಣಿ, ವಿಜಯಲಕ್ಷ್ಮಿ, ಶೋಭಾ, ಆಶಾ, ಕಾವ್ಯ, ಗಂಗಾ, ಲಾವಣ್ಯ ಹಾಗೂ ಭಾಗ್ಯಲಕ್ಷ್ಮಿ ಹಾಜರಿದ್ದರು.

## ಬ್ರಾಹ್ಮಣ ಸಮಾಜದ ಮಹಿಳಾ ವಿಭಾಗದಿಂದ ಭಗವದ್ಗೀತಾ ಸ್ಪರ್ಧೆ

ದಾವಣಗೆರೆ, ಡಿ.17- ಬ್ರಾಹ್ಮಣ ಸಮಾಜದ ಮಹಿಳಾ ವಿಭಾಗದಿಂದ ಗೀತಾ ಜಯಂತಿ ಅಂಗವಾಗಿ ಭಗವದ್ಗೀತಾ ಸ್ಪರ್ಧೆಯನ್ನು ನಡೆಸಲಾಯಿತು ಎಂದು ಕಾರ್ಯದರ್ಶಿ ಶ್ರೀಮತಿ ಶ್ರೀಮತ ಅಡಿಗ ತಿಳಿಸಿದ್ದಾರೆ.

ನಗರದ ವರ್ತುಲ ರಸ್ತೆಯ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಶಾರದಾಂಬ ದೇವಸ್ಥಾನದ ಸಭಾಂಗಣದಲ್ಲಿ ಇದೇ ದಿನಾಂಕ 23ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಭಗವದ್ಗೀತಾ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಗುವುದು. ನಂತರ ಭಗವದ್ಗೀತೆ 18 ಅಧ್ಯಾಯದ ಪಠಣವಿರುತ್ತದೆ.

ಮೊದಲ ವಿಭಾಗದ ವಿಜೇತರು (1 ರಿಂದ 6 ವರ್ಷ) : ಪ್ರಥಮ: ವಿಭಾ ಕಶ್ಯಪ್, ಶ್ರೇಯಸ್. ದ್ವಿತೀಯ: ಜಾಹ್ನವಿ ಯು.ಎಂ., ರಿಷಿಕ ಎಸ್.ಜಿ., ಪಂಡಿತಾರಾಧ್ಯ ಜಿ.ಎಂ., ತೃತೀಯ : ಸಾನ್ವಿ ಎಂ.ಡಿ. ಇವರುಗಳು ವಿಜೇತರಾಗಿದ್ದಾರೆ.

ಸಮಾಧಾನಕಾರ ಬಹುಮಾನ ವಿಜೇತರು : ಆದ್ವಿ ಡಿ.ಎನ್., ಪಿಶಿಕಾ ಪಾಟೀಲ್, ಜ್ಞಾನೇಶ್ ಕೋಟಿ, ತ್ರಿಷಿಕಾ ಕೆ.ವಿ.

ಎರಡನೇ ವಿಭಾಗದ ವಿಜೇತರು (7 ರಿಂದ 12 ವರ್ಷ) : ಪ್ರಥಮ : ವೈಷ್ಣವಿ ರವಿ, ದ್ವಿತೀಯ :ಖುಷಿ, ಸಾನ್ವಿಕ್, ಭಗತ್ ಆರ್ಯ, ತೃತೀಯ : ಸಾತ್ವಿಕ್ ನಾಯಕ್, ಪವನ್ ಸಿ.ಎಂ.

ಸಮಾಧಾನಕಾರ ಬಹುಮಾನ ವಿಜೇತರು : ದೈವಿಕ್ ಪುಲಾವತ್ತಿ, ಆದ್ಯ ಎನ್.ಹೆಚ್., ಜೀವಿಕಾ ಎಂ.

ಮೂರನೇ ವಿಭಾಗದ ವಿಜೇತರು (13 ರಿಂದ 18 ವರ್ಷ) : ಪ್ರಥಮ : ಸಹನಾ. ಬಿ., ದ್ವಿತೀಯ : ಚೇತನ. ಜಿ.

## ನಾಗಪುರದ ಸ್ಫೋಟಕ ಕಾರ್ಖಾನೆಯಲ್ಲಿ ಅವಘಡ : 9 ಸಾವು

ನಾಗಪುರ, ಡಿ. 17 – ಮಹಾರಾಷ್ಟ್ರದ ನಾಗಪುರ ಜಿಲ್ಲೆಯ ಚಕ್ಡೊ ಎಂಬಲ್ಲಿನ ಸ್ಫೋಟಕ ಉತ್ಪಾದನಾ ಕಾರ್ಖಾನೆಯಲ್ಲಿ ಸಂಭವಿಸಿದ ಅವಘಡದಲ್ಲಿ ಒಂಭತ್ತು ಜನ ಸಾವನ್ನಪ್ಪಿದ್ದಾರೆ ಹಾಗೂ ಇತರೆ ಮೂವರು ತೀವ್ರವಾಗಿ ಗಾಯಗೊಂಡಿದ್ದಾರೆ.

ಬೆಳಿಗ್ಗೆ 9 ಗಂಟೆಯ ಸಮಯದಲ್ಲಿ ಈ ಅವಘಡ ಸಂಭವಿಸಿದೆ ಎಂದು ಸೋಲಾರ್ ಇಂಡಸ್ಟ್ರೀಸ್ ಇಂಡಿಯಾ ಲಿಮಿಟೆಡ್ ಕಂಪನಿಯ ಹಿರಿಯ ಪ್ರಧಾನ ವ್ಯವಸ್ಥಾಪಕ ಆಶೀಸ್ ಶ್ರೀವಾಸ್ತವ ತಿಳಿಸಿದ್ದಾರೆ. ಅವಘಡ ನಡೆದ ಸ್ಥಳದ ಸಮೀಪ ಸ್ಫೋಟಕಗಳಿವೆ. ಅವುಗಳನ್ನು ತೆರವುಗೊಳಿಸುವ ಕಾರ್ಯ ನಡೆದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

## ಕೂಲಿ ಹಣ ಬಿಡುಗಡೆಗೆ ಆಗ್ರಹಿಸಿ ಪಲ್ಲಾಗಟ್ಟೆಯಲ್ಲಿ ಪ್ರತಿಭಟನೆ



ದಾವಣಗೆರೆ, ಡಿ.17- ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ (ಗ್ರಾಕೂಸ್) ತಾಲ್ಲೂಕು ಕಾರ್ಯಕರ್ತರು ಪಲ್ಲಾಗಟ್ಟೆಯಲ್ಲಿ ನರೇಗಾದಿಂದ ಮೂರು ತಿಂಗಳಿಂದ ಹಣ ಬಿಡುಗಡೆಯಾಗದೇ ಇರುವ ಬಗ್ಗೆ ಪ್ರಧಾನಮಂತ್ರಿಯವರಿಗೆ ಪತ್ರ ಚಳುವಳಿ ಮಾಡಲಾಯಿತು.ರಾಜ್ಯ ಸರ್ಕಾರ ಕೂಡ ಬರಗಾಲ ಎಂದು ಘೋಷಣೆ ಮಾಡಿದೆ, ಅದೇ ರೀತಿ ಕೇಂದ್ರ ಸರ್ಕಾರ ಕೂಡ ಬರಗಾಲ ಎಂದು ಘೋಷಣೆ ಮಾಡಬೇಕು. ಮೂರು ವೇತನವನ್ನು ಬಡ್ಡಿ ಸಮೇತವಾಗಿ ಹಣ ಬಿಡುಗಡೆ ಮಾಡಬೇಕು ಎಂದು ಕಾರ್ಮಿಕರು ಪತ್ರ ಚಳುವಳಿ ಮಾಡಿದರು.

ಚಳುವಳಿಯಲ್ಲಿ ದಾವಣಗೆರೆ ತಾಲ್ಲೂಕು ಕಾರ್ಯಕರ್ತರಾದ ಶಶಿಕಲಾ, ಹುಲಿಗೆಮ್ಮ, ಜ್ಯೋತಿ, ಅನ್ನಪೂರ್ಣ, ಹನುಮಂತಪ್ಪ, ಚಂದ್ರಪ್ಪ, ಜಯಪ್ಪ ಮುಂತಾದ ಕಾರ್ಮಿಕರು ಭಾಗವಹಿಸಿದ್ದರು.

## ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳ ಸೇವಾ ದೀಕ್ಷೆ ನಾಳೆ

ದಾವಣಗೆರೆ, ಡಿ.17-ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತಿನ ನೂತನ ಪದಾಧಿಕಾರಿಗಳ ಸೇವಾ ದೀಕ್ಷೆ ಹಾಗೂ ಶರಣ ಚಿಂತನ ಕಾರ್ಯಕ್ರಮವು ನಾಡಿದ್ದು ದಿನಾಂಕ 19ನೇ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.

ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು. ಶಾಸಕ ಕೆ.ಎಸ್. ಬಸವಂತಪ್ಪ ಕಾರ್ಯಕ್ರಮವನ್ನು ಉದ್ಘಾಟಿಸುವರು. ಹೆಚ್.ಆರ್. ಲಿಂಗರಾಜು ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಹೆಚ್.ಎಸ್. ಮಲ್ಲಿಕಾರ್ಜುನಪ್ಪ 'ನಡೆ-ನುಡಿಗಳ ಶುದ್ಧಿ' ವಿಷಯ ಕುರಿತು ಅನುಭಾವ ನಡೆಸಿಕೊಡುವರು. ಆವರಗೆರೆ ರುದ್ರಮುನಿ ಪ್ರಾಸ್ತಾವಿಕ ನುಡಿಗಳನ್ನಾಡುವರು. ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ದೀಕ್ಷಾ ಬೋಧನೆ ನಡೆಸಿಕೊಡುವರು. ಎಸ್.ಬಿ. ರುದ್ರೇಗೌಡ ಸೇವಾ ದೀಕ್ಷೆ ಸ್ವೀಕರಿಸುವರು. ಕಾರ್ಯಕ್ರಮದಲ್ಲಿ ಬಸವ ಕಲಾ ಲೋಕ, ಬಸಾಪುರ ಇವರಿಂದ ವಚನಗಾಯನ ನಡೆಯುವುದು.

## ಓದುಗರ ಪತ್ರ

### ಅಕ್ಷರ ದೋಷ ನಿವಾರಿಸಿ

ಮಾನ್ಯರೇ

ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿ ಐವತ್ತು ವರ್ಷಗಳು ಪೂರ್ಣಗೊಂಡ ಸಂಭ್ರಮದ ಧ್ಯೋತಕವಾಗಿ ರಾಜ್ಯ ಸರ್ಕಾರ "ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ" ಎಂಬ ಘೋಷ ವಾಕ್ಯದೊಂದಿಗೆ ವರ್ಷವಿಡೀ ಕನ್ನಡ ಸಾಹಿತ್ಯ,ನೆಲ, ಜಲ, ಭಾಷೆ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುವಂತೆ ಆದೇಶ ಹೊರಡಿಸಿದೆ.ಇದು ಸ್ವಾಗತಾರ್ಹ ಕ್ರಮ.

ಆದರೆ ಪ್ರಸ್ತುತ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಗೆ ಸಂಬಂಧ ಪಟ್ಟಂತೆ ಗ್ರಾಮ ಠಾಣಾ ವ್ಯಾಪ್ತಿಯ ಇ-ಸ್ವತ್ತು ಮಾಡಿಸುವ ವ್ಯವಸ್ಥೆಯ ಕಂಪ್ಯೂಟರ್‌ನಲ್ಲಿ ಬರುವ ಅರ್ಜಿಯಲ್ಲಿ 'ಅಸ್ತಿಯ ವರ್ಗೀಕರಣ', 'ಅಸ್ತಿಯ ಪ್ರಕಾರ', 'ಅಸ್ತಿಯ ಸ್ವಾಧೀನತೆ ರೀತಿ', 'ಅಸ್ತಿಯ ವಿಧ', ಎಂದು ತಪ್ಪಾಗಿ ನಮೂದಿಸಿರುತ್ತಾರೆ. 'ಆಸ್ತಿ' ಎಂದಾಗಬೇಕಿದ್ದ ಜಾಗದಲ್ಲಿ 'ಅಸ್ತಿ' ಎಂಬ ಪದ ಪ್ರಯೋಗಿಸಿ ಪದದ ಅರ್ಥವನ್ನೇ ಅಪಭ್ರಂಶಗೊಳಿಸಿ ಅನರ್ಥ ಮಾಡಿದ್ದಾರೆ. ಇಂತಹ ತಪ್ಪನ್ನು ಸಂಬಂಧ ಪಟ್ಟ ಇಲಾಖೆಯವರು ಕೂಡಲೇ ತಿದ್ದಿಕೊಳ್ಳಲಿ. ಆ ಮೂಲಕ ಕನ್ನಡದ ಪದ ಪ್ರಯೋಗ ಸರಿಯಾಗಲಿ ಎಂಬುದು ನಮ್ಮ ಆಶಯ.

- ಮಾ.ಬ. ನಾಗರಾಜ ಕುಂದೂರು, ದಾವಣಗೆರೆ. ಮೊ- 9611480732

## ವೀರಶೈವ ಲಿಂಗಾಯತರನ್ನು ರಾಷ್ಟ್ರ ಮಟ್ಟದಲ್ಲಿ ಅಲ್ಪಸಂಖ್ಯಾತರೆಂದು ಗುರುತಿಸಬೇಕು

### ಹರಪನಹಳ್ಳಿ ತಾಲ್ಲೂಕು ವೀರಶೈವ ಮಹಾಸಭಾದ ತಾಲ್ಲೂಕು ಘಟಕದ ಅಧ್ಯಕ್ಷ ಎಂ. ರಾಜಶೇಖರ್ ಒತ್ತಾಯ



ಹರಪನಹಳ್ಳಿ, ಡಿ. 17 - ಜಾತಿ-ಗಣತಿ ಮರು ಸರ್ವೆ ಮಾಡಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಸರ್ಕಾರದ ಗಮನ ಸೆಳೆಯಲು ಹಾಗೂ ಸಂಘಟನೆಗಾಗಿ ದಾವಣಗೆರೆಯಲ್ಲಿ ಇದೇ ದಿನಾಂಕ 23 ಹಾಗೂ 24 ರಂದು ನಡೆಯುವ ಅಖಿಲ ಭಾರತ ವೀರಶೈವ ಲಿಂಗಾಯುತ ಮಹಾಸಭಾದ 24ನೇ ಮಹಾ ಅಧಿವೇಶನದ ಉದ್ದೇಶವಾಗಿದೆ.

ಈ ಕುರಿತು ಪಟ್ಟಣದ ಕೆ.ಸಿ.ಎ. ಆಂಗ್ಲ ಮಾಧ್ಯಮ ಶಾಲೆ ಆವರಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೀರಶೈವ ಮಹಾಸಭಾದ ತಾಲ್ಲೂಕು ಘಟಕದ ಅಧ್ಯಕ್ಷ ಎಂ. ರಾಜಶೇಖರ ಅವರು, ಈಗ ನಡೆಸಿರುವ ಜಾತಿ ಗಣತಿ ವೈಜ್ಞಾನಿಕವಾಗಿಲ್ಲ, ಆದ್ದರಿಂದ ಜಾತಿ ಗಣತಿಯನ್ನು ಇನ್ನೊಮ್ಮೆ ವೈಜ್ಞಾನಿಕವಾಗಿ ನಡೆಸಬೇಕು ಎಂಬುದು ನಮ್ಮ ಒತ್ತಾಯವಾಗಿದೆ ಎಂದು ಹೇಳಿದರು.

ವೀರಶೈವ ಲಿಂಗಾಯುತರು ರಾಷ್ಟ್ರಮಟ್ಟದಲ್ಲಿ ಅಲ್ಪಸಂಖ್ಯಾತರಾಗಿದ್ದು, ನಮ್ಮನ್ನು ರಾಷ್ಟ್ರ ಮಟ್ಟದಲ್ಲಿ ಅಲ್ಪಸಂಖ್ಯಾತರೆಂದು ಗುರುತಿಸಬೇಕು. ಹೀಗೆ ವಿವಿಧ ಬೇಡಿಕೆಗಳ ಹಕ್ಕೊತ್ತಾಯವನ್ನು ಅಂದಿನ ಮಹಾ ಅಧಿವೇಶನದಲ್ಲಿ ಮಾಡಿ ಸರ್ಕಾರದ ಗಮನ ಸೆಳೆಯಲಾಗುವುದು ಎಂದು ಅವರು ಹೇಳಿದರು.

ಅಂದು ಬೆಳಿಗ್ಗೆ 10.30ಕ್ಕೆ ಪಂಚಪೀಠದ ಶ್ರೀ ಉಜ್ಜಯಿನಿ, ಶ್ರೀಶೈಲ ಜಗದ್ಗುರುಗಳು, ತುಮಕೂರು ಸಿದ್ದಗಂಗಾ ಶ್ರೀಗಳು, ಹರಿಹರ ಪಂಚಮಸಾಲಿ ಪೀಠದ ಸ್ವಾಮಿಗಳು, ಗದಗಿನ ಕಲ್ಲಯ್ಯಜ್ಜಯ್ಯನವರು, ಹುಬ್ಬಳ್ಳಿ ಮೂರು ಸಾವಿರ ಮಠದ ಸ್ವಾಮೀಜಿಗಳು ಸಾನಿಧ್ಯದಲ್ಲಿ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ವಹಿಸುವರು. ಅಂದಿನ ಸಮಾರಂಭಕ್ಕೆ ಹರಪನಹಳ್ಳಿ ತಾಲ್ಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಪಾಲ್ಗೊಳ್ಳಬೇಕು ಎಂದು ಕೋರಿದರು.

ವೀರಶೈವ ಮಹಾಸಭಾದ ವಿಜಯನಗರ ಜಿಲ್ಲಾ ಉಸ್ತುವಾರಿ ಪ್ರಕಾಶ ಪಾಟೀಲ್ ಸಹ ಸಮಾರಂಭದ ಮಾಹಿತಿ ನೀಡಿದರು. ವೀರಶೈವ ಮಹಾಸಭಾದ ಕಾರ್ಯದರ್ಶಿ ಟಿ.ಎಂ. ಮಲ್ಲಿಕಾರ್ಜುನ ಪದಾಧಿಕಾರಿಗಳಾದ ಶಶಿಧರ ಪೂಜಾರ, ಅಂಬ್ಲಿ ಮಂಜುನಾಥ, ಹೆಚ್.ಎಂ. ಕೊಟ್ರಯ್ಯ, ಕಾನಹಳ್ಳಿ ರುದ್ರಪ್ಪ, ಹೆಚ್.ಎಂ. ಜಗದೀಶ, ವಾಗೀಶ, ಆರ್.ಎಂ. ಕೊಟ್ರಯ್ಯ, ಕಲ್ಲಹಳ್ಳಿ ಗುರುಸಿದ್ದಯ್ಯ, ವಕೀಲ ಬಸವರಾಜ, ಕಾಶಿನಾಥ ಇತರರು ಹಾಜರಿದ್ದರು.

## ನಗರದಲ್ಲಿ ಇಂದು ಶ್ರೀ ವಿಶ್ವಬಂಧು ಮರುಳಸಿದ್ಧೇಶ್ವರ ದೇವಸ್ಥಾನದಲ್ಲಿ ದೀಪೋತ್ಸವ, ಸಾಂಸ್ಕೃತಿಕ ವೈಭವ





ತರಳಬಾಳು ವೃತ್ತದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದ ಆವರಣದಲ್ಲಿರುವ ಶ್ರೀ ವಿಶ್ವಬಂಧು ಮರುಳಸಿದ್ಧೇಶ್ವರ ದೇವಸ್ಥಾನದಲ್ಲಿ 16ನೇ ವರ್ಷದ ಕಾರ್ತಿಕೋತ್ಸವದ ಪ್ರಯುಕ್ತ ಸಹಸ್ರ ದೀಪೋತ್ಸವ ಮತ್ತು ಸಾಂಸ್ಕೃತಿಕ ವೈಭವವನ್ನು ಇಂದು ಸಂಜೆ 7 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಸಿರಿಗೆರೆ ಬೃಹನ್ಮಠದ ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

12ನೇ ಶತಮಾನದಲ್ಲಿ ಸರ್ವ ಜನಾಂಗದ ಹಿತಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ತೆಲುಗುಬಾಳು ಸಿದ್ಧನನ್ನು ಉಜ್ಜಯಿನಿಯ ಸದ್ಧರ್ಮ ಪೀಠದ ಮೇಲೆ ಕುಳ್ಳಿರಿಸಿ 'ತರಳಾ, ಬಾಳು' ಎಂದು ಹರಸಿ ಆಶೀರ್ವದಿಸಿದ ಎಲ್ಲರ ಆರಾಧ್ಯ ದೈವ, ಮಹಾಪುರುಷರಾದ ಶ್ರೀ ವಿಶ್ವಬಂಧು ಮರುಳಸಿದ್ಧರ ಕಾರ್ತಿಕೋತ್ಸವದ ಪ್ರಯುಕ್ತ ಈ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಇಂದು ಸಂಜೆ 6.30 ಕ್ಕೆ ತರಳಬಾಳು ಬಡಾವಣೆಯ ಶಿವಕುಮಾರ ಸ್ವಾಮಿ ಮಹಾಮಂಟಪದಲ್ಲಿರುವ ಶ್ರೀ ಮರುಳಸಿದ್ಧೇಶ್ವರ ದೇವಸ್ಥಾನದಲ್ಲಿ ದೀಪೋತ್ಸವವನ್ನು ಜಗದ್ಗುರುಗಳು ಉದ್ಘಾಟಿಸಿ, ನಂತರ 7 ಗಂಟೆಗೆ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದ ಆವರಣದಲ್ಲಿರುವ ಶ್ರೀ ವಿಶ್ವಬಂಧು ಮರುಳಸಿದ್ಧೇಶ್ವರ ದೇವಸ್ಥಾನದಲ್ಲಿ ದೀಪ ಬೆಳಗಿಸಿ ಕಾರ್ತಿಕೋತ್ಸವಕ್ಕೆ ಚಾಲನೆ ನೀಡಲಿದ್ದಾರೆ.

ನಂತರ ಕಲ್ಯಾಣ ಮಂಟಪದಲ್ಲಿ ವಿವಿಧ ಕಲಾ ತಂಡಗತಳಿಂದ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ನೆರ ವೇರಲಿದ್ದು, ಶ್ರೀಗಳು ಆಶೀರ್ವಚನ ದಯಪಾಲಿಸಲಿದ್ದಾರೆ.

ಸಾಂಸ್ಕೃತಿಕ ವೈಭವ ಕಾರ್ಯಕ್ರಮವನ್ನು ಶ್ರೀ ತರಳಬಾಳು ಪ್ರೌಢಶಾಲಾ ಮಕ್ಕಳು ಅನುಭವ ಮಂಟಪ (ದಾವಣಗೆರೆ), ಶ್ರೀ ಮಾಗನೂರು ಬಸಪ್ಪ ಪ್ರೌಢಶಾಲೆ ಮಕ್ಕಳು, ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ, ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಪ್ರೌಢಶಾಲೆ (ಎಲೇಬೆತೂರು), ತುಳಸಿ ಮಹಿಳಾ ಸಂಘ (ಸಿದ್ಧವೀರಪ್ಪ ಬಡಾವಣೆ, ದಾವಣಗೆರೆ) ಇವರುಗಳು ನಡೆಸಿಕೊಡಲಿದ್ದಾರೆ.

# ಪೊಲೀಸರು ತನಿಖಾ ಕುಶಲಿಗಳಾದಷ್ಟೂ ಅಪರಾಧಿಗಳಿಗೆ ಶಿಕ್ಷೆ

## ಪೊಲೀಸ್ ಕರ್ತವ್ಯ ಕೂಟ ಉದ್ಘಾಟನೆಯಲ್ಲಿ ನ್ಯಾಯಾಧೀಶರಾದ ಆರ್.ಎನ್. ಪ್ರವೀಣ್ ಕುಮಾರ್

ದಾವಣಗೆರೆ, ಡಿ. 17 – ಪೊಲೀಸರು ಪ್ರಕರಣಗಳ ತನಿಖೆಗೆ ಅಗತ್ಯವಾದ ಕೌಶಲ್ಯಗಳನ್ನು ವೃದ್ಧಿಸಿಕೊಳ್ಳುವುದರಿಂದ ಅದು ಪೊಲೀಸರಿಗಷ್ಟೇ ಅಲ್ಲದೇ ನ್ಯಾಯಾಧೀಶರಿಂದ ಹಿಡಿದು ಸಂತ್ರಸ್ತರವರೆಗೆ ನೆರವಾಗುತ್ತದೆ ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ 2ನೇ ಹೆಚ್ಚುವರಿ ನ್ಯಾಯಾಧೀಶ ಆರ್. ಎನ್. ಪ್ರವೀಣ್ ಕುಮಾರ್ ತಿಳಿಸಿದರು.

ಜಿಲ್ಲಾ ಪೊಲೀಸ್ ಸಭಾಂಗಣದಲ್ಲಿ ಆಯೋಜಿಸ ಲಾಗಿದ್ದ ಪೂರ್ವ ವಲಯ ಪೊಲೀಸ್ ಕರ್ತವ್ಯ ಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪೊಲೀಸರ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ 18 ವಿವಿಧ ಸ್ಪರ್ಧೆ ಗಳನ್ನು ಆಯೋಜಿಸಲಾಗಿದೆ. ಇದರಿಂದ ಪೊಲೀಸರ ತನಿಖಾ ಸಾಮರ್ಥ್ಯ ಹೆಚ್ಚಾಗ ಲಿದೆ. ಇದು ಸಾರ್ವಜನಿಕ ಅಭಿಯೋ ಜಕರು ಹಾಗೂ ನ್ಯಾಯಾಧೀಶರಿಗೆ ನೆರವಾಗುತ್ತದೆ. ಇದರಿಂದ ಸಂತ್ರಸ್ತರಿಗೂ ನೆರವಾದಂತಾಗುತ್ತದೆ ಎಂದರು.

ಅನುಮಾನಕ್ಕೆ ಎಡೆಯಿಲ್ಲದಂತೆ ಆರೋಪ ಸಾಬೀತು ಪಡಿಸಿದಾಗ ಮಾತ್ರ ಶಿಕ್ಷೆ ವಿಧಿಸಲು ಸಾಧ್ಯ. ತನಿಖಾ ಹಂತದಲ್ಲಿ ಆಗುವ ಲೋಪಗಳು ಆರೋಪಿಯ ಪರವಾಗಿ ಬಳಕೆಯಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ತನಿಖಾಧಿಕಾರಿಗಳ ಮೇಲೆ ಹೆಚ್ಚಿನ ಹೊಣೆ ಇದೆ ಎಂದು ಹೇಳಿದರು.

ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನು ಸಿದ್ಧಪ ಡಿಸಿಕೊಳ್ಳಬೇಕು. ನಿಗದಿತ ಅವಧಿಯಲ್ಲಿ ತನಿಖೆ ಪೂರ್ಣಗೊಳಿಸಬೇಕು. ಅಗತ್ಯ ವಾದಲ್ಲಿ ಹೆಚ್ಚಿನ ಕೌಶಲ್ಯ ಹೊಂದಿರುವ ಇತರೆ ಪೊಲೀಸ್ ಅಧಿಕಾರಿಗಳ ನೆರವು ಪಡೆಯಬೇಕು ಎಂದವರು ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಪೊಲೀಸರು ಅಪರಾಧಿಕ ಪ್ರಕರಣಗಳನ್ನು ತನಿಖೆ ಮಾಡಿದರಷ್ಟೇ ಸಾಲದು. ಪ್ರಕರಣಗಳನ್ನು ತಾರ್ಕಿಕ ಅಂತ್ಯಕ್ಕೆ ತಲುಪಿಸಿದಾಗ ಮಾತ್ರ ಸಂತ್ರಸ್ತರಿಗೆ ನ್ಯಾಯ ಸಿಗಲು ಸಾಧ್ಯ. ತನಿಖಾ ಸಂದರ್ಭದಲ್ಲಿ ಮೂಲ ವಿಷಯಗಳಲ್ಲೇ ತಪ್ಪಾಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳು ಹೆಚ್ಚಾಗಿವೆ. ಸೈಬರ್ ವಲಯದ ಬಗ್ಗೆಯೂ ಹೆಚ್ಚಿನ ತಿಳುವಳಿಕೆ ಹೊಂದಬೇಕು. ವಿಧಿ ವಿಜ್ಞಾನ ವಲಯದ ಕಾರ್ಯನಿರ್ವಹಣೆ, ಶ್ವಾನ ದಳದ ಕಾರ್ಯನಿರ್ವಹಣೆಯ ಬಗ್ಗೆಯೂ ತಿಳಿದುಕೊಳ್ಳಬೇಕು ಎಂದು ತಿಳಿಸಿದರು.



### ಒಂದು ಲೋಪ ಖುಲಾಸೆಗೆ ಕಾರಣವಾಗಬಹುದೇ?

ಹಲವು ಸಾಕ್ಷಿಗಳು ಅಪರಾಧ ಸಾಬೀತು ಪಡಿಸುವಂತಿದ್ದರೂ ಸಹ, ಒಂದು ಲೋಪದ ಕಾರಣದಿಂದ ಆರೋಪಿಯನ್ನು ಖುಲಾಸೆ ಮಾಡಬಹುದೇ? ಈ ರೀತಿಯ ಪ್ರಶ್ನೆ ಹುಟ್ಟು ಹಾಕುವ ಒಂದು ಪ್ರಕರಣ ಸುಪ್ರೀಂ ಕೋರ್ಟ್‌ವರೆಗೂ ತಲುಪಿತ್ತು. ನ್ಯಾಯಾಧೀಶರ ಕೆಲಸ ಸಂತ್ರಸ್ತರಿಗೆ ನ್ಯಾಯ ಕೊಡಿಸುವುದೇ ಹೊರತು, ತನಿಖಾಧಿಕಾರಿಯಿಂದ ಆದ ತಪ್ಪುಗಳನ್ನು ಹುಡುಕುವುದಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿತ್ತು.

ಈ ಪ್ರಕರಣವನ್ನು ತಿಳಿಸಿದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ 2ನೇ ಹೆಚ್ಚುವರಿ ನ್ಯಾಯಾಧೀಶ ಆರ್. ಎನ್. ಪ್ರವೀಣ್ ಕುಮಾರ್, ಹತ್ಯೆ ಪ್ರಕರಣವೊಂದರಲ್ಲಿ ಪ್ರತ್ಯಕ್ಷದರ್ಶಿಗಳೂ ಸೇರಿದಂತೆ ಹಲವು ಸಾಕ್ಷಿಗಳು ಆರೋಪಿಗೆ ವಿರುದ್ಧವಾಗಿದ್ದವು. ಆದರೆ, ತನಿಖಾಧಿಕಾರಿಗಳು ಎಸಗಿದ ಲೋಪವೊಂದರ ಕಾರಣದಿಂದ ವೈದ್ಯರ ಸಾಕ್ಷಿ ಆರೋಪಿಗೆ ಅನುಕೂಲವಾಗುವಂತಿತ್ತು. ಈ ಅಂಶ ಪರಿಗಣಿಸಿ ಜಿಲ್ಲಾ ನ್ಯಾಯಾಲಯ ಹಾಗೂ ಹೈಕೋರ್ಟ್‌ಗಳು ಆರೋಪಿ ಪರ ತೀರ್ಪು ನೀಡಿದ್ದವು ಎಂದರು.

ಆದರೆ, ಇದೇ ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ನ್ಯಾಯಾಧೀಶರ ಕೆಲಸ ಪ್ರಕರಣದ ತನಿಖೆಯಲ್ಲಿನ ಲೋಪಗಳನ್ನು ಹುಡುಕುವುದಲ್ಲ. ನ್ಯಾಯಾಧೀಶರು ಸಂತ್ರಸ್ತರಿಗೆ ನ್ಯಾಯ ಒದಗಿಸಬೇಕು ಎಂದು ತಿಳಿಸಿತ್ತು. ಹಾಗೂ ಪ್ರಕರಣದಲ್ಲಿ ಆರೋಪಿಗೆ ಶಿಕ್ಷೆ ವಿಧಿಸಿತ್ತು ಎಂದು ನ್ಯಾಯಾಧೀಶ ಪ್ರವೀಣ್ ಕುಮಾರ್ ಹೇಳಿದರು.

### ಕೂದಲೂ ಸಾಕ್ಷಿ ಆಗಬಹುದು

ವಿಧಿ ವಿಜ್ಞಾನ ವಲಯ ಈಗ ಸಾಕಷ್ಟು ಪ್ರಗತಿ ಹೊಂದಿದೆ ಹಾಗೂ ಪೊಲೀಸರಿಗೆ ಹೆಚ್ಚು ಸುಲಭವಾಗಿ ಲಭ್ಯವಾಗುತ್ತಿದೆ. ಈ ತಂತ್ರಜ್ಞಾನವನ್ನು ಪೊಲೀಸರು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದು ಎಸ್ಪಿ ಉಮಾ ಪ್ರಶಾಂತ್ ಹೇಳಿದರು.

ಇತ್ತೀಚೆಗೆ ಸಂಪೂರ್ಣ ಸುಟ್ಟು ಹೋದ ಮೃತದೇಹವೊಂದು ಪತ್ತೆಯಾಗಿತ್ತು. ಮೃತದೇಹ ಗುರುತಿಸುವುದು ಕಷ್ಟವಾಗಿತ್ತು. ಆದರೆ, ಸೂಕ್ಷ್ಮವಾಗಿ ಶೋಧಿಸಿದಾಗ ಮೃತರ ಕೆಲ ಕೂದಲುಗಳು ದೊರೆತವು. ಇದನ್ನು ಡಿ.ಎನ್.ಎ. ಪರೀಕ್ಷೆಗೆ ಒಳಪಡಿಸಿದಾಗ ಮೃತರ ಗುರುತು ಪತ್ತೆ ಮಾಡಲು ಸಾಧ್ಯವಾಯಿತು. ವಿಧಿ ವಿಜ್ಞಾನ ಸಾಕ್ಷಿಗಳು ಹಾಗೂ ದಾಖಲೆಗಳ ಆಧಾರದ ಮೇಲೆ ಹಲವಾರು ಪ್ರಕರ ಣಗಳು ಇತ್ಯರ್ಥವಾಗುತ್ತಿವೆ ಎಂದವರು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಡಿವೈಎಸ್‌ಪಿ ಹಾಗೂ ಕರ್ತವ್ಯ ಕೂಟದ ನೋಡಲ್ ಅಧಿಕಾರಿ ಎ.ಕೆ. ರುದ್ರೇಶ್, ಪೂರ್ವ ವಲಯದ ನಾಲ್ಕು ಜಿಲ್ಲೆಗಳ ಪೊಲೀಸರು ಕರ್ತವ್ಯ ಕೂಟದಲ್ಲಿ ಭಾಗಿಯಾಗಿದ್ದಾರೆ. 2016ರಲ್ಲಿ ಕರ್ತವ್ಯ ಕೂಟ ಆರಂಭಿಸಲಾಗಿತ್ತು. ಈಗ ಐದನೇ ಕರ್ತವ್ಯ ಕೂಟ ನಡೆಯುತ್ತಿದೆ. ಜಿಲ್ಲಾ ಮಟ್ಟದಿಂದ ಹಿಡಿದು ರಾಷ್ಟ್ರಮಟ್ಟದವರೆಗೆ ಪೊಲೀಸ್ ಕರ್ತವ್ಯ ಕೂಟಗಳು ನಡೆಯುತ್ತವೆ ಎಂದು ಹೇಳಿದರು.

ವೇದಿಕೆಯ ಮೇಲೆ ದೊಡ್ಡಬಾತಿಯ ಆರ್.ಎಫ್. ಎಸ್.ಎಲ್. ಉಪ ನಿರ್ದೇಶಕಿ ಡಾ. ಛಾಯಾ ಕುಮಾರಿ ಉಪಸ್ಥಿತರಿದ್ದರು.

ಬೆಸ್ಕಾಂ ಜಾಗೃತ ದಳ ಠಾಣೆಯ ಸಿ.ಪಿ.ಸಿ. ಸಂಗೇನಹಳ್ಳಿ ದೇವರಾಜ ನಿರೂಪಿಸಿದರೆ, ಪೊಲೀಸ್ ಉಪಾಧೀಕ್ಷಕ ಪಿ.ಬಿ. ಪ್ರಕಾಶ್ ವಂದಿಸಿದರು.

# ದೇಹಾಭಿಮಾನಿಗಳಾಗದೇ ಆತ್ಮದ ಸ್ಮೃತಿಯಲ್ಲಿರಬೇಕು

## 'ಶರಣರು ಕಂಡ ಶಿವ' ಪ್ರವಚನದಲ್ಲಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ಆಶಯ

ದಾವಣಗೆರೆ, ಡಿ. 17 – ನಾನು ದೇಹವೆಂಬ ಸ್ಮೃತಿಯಲ್ಲಿದ್ದುಕೊಂಡು ದೇಹಾಭಿಮಾನಿಗಳಾಗಬಾರದು. ಆತ್ಮದ ಸ್ಮೃತಿಯಲ್ಲಿದ್ದುಕೊಂಡು ಆತ್ಮಾಭಿಮಾನಿಗಳಾಗಬೇಕು ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಹುಬ್ಬಳ್ಳಿ ಉಪ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ಆಶಯ ವ್ಯಕ್ತಪಡಿಸಿದರು.

ಇಲ್ಲಿನ ವಿದ್ಯಾನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಆವರಣದಲ್ಲಿ ನಡೆಯುತ್ತಿರುವ 'ಶರಣರು ಕಂಡ ಶಿವ' ಪ್ರವಚನ ಮಾಲೆಯ 14ನೇ ದಿನವಾದ ಭಾನುವಾರದ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು.


ಜೀವನದಲ್ಲಿ ಮಾಡಿದ ಪಾಪ – ಪುಣ್ಯಗಳು ಸತ್ತ ನಂತರ ದೇಹದ ರೀತಿಯಲ್ಲೇ ನಶಿಸಿ ಹೋಗುತ್ತವೆ ಎಂಬುದು ಭ್ರಮೆ. ಪಾಪ ಹಾಗು ಪುಣ್ಯಗಳು ಆತ್ಮಕ್ಕೆ ಅಂಟಿಕೊಂಡಿರುತ್ತವೆ. ಹೀಗಾಗಿಯೇ ಪುಣ್ಯಾತ್ಮ – ಪಾಪಾತ್ಮ ಎಂಬ ಪದಗಳು ಬಂದಿವೆ ಎಂದವರು ಪ್ರತಿಪಾದಿಸಿದರು.

ಈಗಿನ ಜನ್ಮದಲ್ಲಷ್ಟೇ ಅಲ್ಲದೇ, ಹಿಂದಿನ ಜನ್ಮಗಳ ಪಾಪ ಹಾಗು ಪುಣ್ಯಗಳು ಆತ್ಮಕ್ಕೆ ಅಂಟಿಕೊಂಡು ಬಂದಿರುತ್ತವೆ. ಕಳೆದ ಜನ್ಮದಲ್ಲಿ ಗೊತ್ತಿರದೇ ಏನೋ ತಪ್ಪುಗಳಾಗಿ ಪಾಪಗಳು ಬಂದಿರಬ ಹುದು. ಅದನ್ನು ಈ ಜನ್ಮದಲ್ಲಿ ಸರಿಪಡಿಸಿ ಕೊಳ್ಳಬೇಕು ಎಂದು ಅವರು ಹಿತ ನುಡಿದರು.

ಪ್ರಾರಬ್ಧ ಕರ್ಮ, ಸಂಚಿತ ಕರ್ಮ ಹಾಗೂ ಭೂಮ್ರ ಕರ್ಮಗಳು ಆತ್ಮಕ್ಕೆ ಅಂಟಿಕೊಂಡು ಬಂದಿರುತ್ತವೆ. ಈ ರೀತಿ ಕರ್ಮಗಳನ್ನು ಪುಣ್ಯದಿಂದ ನಿವಾರಿಸಿಕೊಳ್ಳಬೇಕು ಎಂದು ಬಸವರಾಜ ರಾಜಋಷಿ ಕರೆ ನೀಡಿದರು.

ಮನುಷ್ಯ ಮನಸ್ಸಿಗೆ ತೋಚಿದ ರೀತಿಯಲ್ಲಿ ಯಾವುದೇ ಕೆಲಸಗಳನ್ನು ಮಾಡಬಾರದು. ಬುದ್ಧಿಯ ಮೂಲಕ ನಿರ್ಣ ಯಗಳನ್ನು ತೆಗೆದುಕೊಳ್ಳಬೇಕು. ಸಂಸ್ಕಾರ ಉತ್ತಮ ಪಡಿಸಿಕೊಳ್ಳಬೇಕು ಎಂದವರು ಕಿವಿಮಾತು ಹೇಳಿದರು.

ಸರ್ಕಾರದಲ್ಲಿ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ಇರುತ್ತವೆ. ಅದೇ ರೀತಿ ಆತ್ಮದ ವಿಷಯದಲ್ಲೂ ಮೂರು ಅಂಗಗಳು ಇರುತ್ತವೆ. ಹಿಂದಿನ ಜನ್ಮಗಳಲ್ಲಿ ಮಾಡಿದ ಹಾಗೂ ಈ ಜನ್ಮದಲ್ಲಿ ಮಾಡಿದ ಕರ್ಮಗಳು ಸೇರಿಕೊಂಡು ಸಂಸ್ಕಾರವಾಗುತ್ತವೆ. ಇದನ್ನು ಶಾಸಕಾಂಗ ಎಂದು ಬಣ್ಣಿಸಬಹುದು. ಈ ಸಂಸ್ಕಾರಗಳಿಂದ ಸಂಕಲ್ಪಗಳು ಉತ್ಪತ್ತಿಯಾಗುತ್ತವೆ. ಇದನ್ನೇ ಕಾರ್ಯಾಂಗ ಎನ್ನಬಹುದು. ಈ ಸಂಕಲ್ಪಗಳ ಸರಿ ಹಾಗೂ ತಪ್ಪುಗಳನ್ನು ನಿರ್ಣಯಿಸುವ ಬುದ್ಧಿಯೇ ನ್ಯಾಯಾಂಗದ ರೀತಿಯಲ್ಲಿ ಕೆಲಸ ಮಾಡುತ್ತದೆ ಎಂದವರು ವಿಶ್ಲೇಷಿಸಿದರು.



ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆ ಶಾಖೆಯ ಪ್ರಧಾನ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ನೇತೃತ್ವದಲ್ಲಿ ಸಂಸ್ಥೆಯ ವಿದ್ಯಾನಗರ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಗೀತಾಜಿ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

**ನೇರ ಪ್ರಸಾರ :** ಸುದೀರ್ಘ ಒಂದು ತಿಂಗಳ ಕಾಲ ಪ್ರತಿದಿನ ಸಂಜೆ 6.30 ರಿಂದ 7.30ರವರೆಗೆ 1 ಗಂಟೆ ಸಮಯ ನಡೆಯುವ ಈ ಪ್ರವಚನವನ್ನು ನೇರ ಪ್ರಸಾರ ವೀಕ್ಷಿಸಲು ಯುಟ್ಯೂಬ್ ಚಾನಲ್ಲಾದ ರಾಜಯೋಗ ಟಿವಿ ಕನ್ನಡದಲ್ಲಿ (youtube/rajayogatvkannada) ವೀಕ್ಷಿಸಬಹುದು.


## ಉಕ್ಕಡಗಾತ್ರಿಯಲ್ಲಿ ಸಂಭ್ರಮದ ತುಂಗಭದ್ರಾ ಆರತಿ



ಮಲೇಬೆನ್ನೂರು, ಡಿ.17- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಕಾರ್ತಿಕೋತ್ಸವ, ಬೆಳ್ಳಿ ರಥೋತ್ಸವದ ಅಂಗವಾಗಿ ಭಾನುವಾರ ಸಂಜೆ ತುಂಗಭದ್ರಾ ನದಿಗೆ ವಿಶೇಷ ಪೂಜೆ ಸಲ್ಲಿಸಿ, ಆರತಿ ಮಾಡಲಾಯಿತು. ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಸಂಭ್ರಮದಿಂದ ಜರುಗಿದ ತುಂಗಭದ್ರಾ ಆರತಿಯಲ್ಲಿ ಹರ-ಚರ-ಗುರುಮೂರ್ತಿಗಳು, ಅಪಾರ ಭಕ್ತರು ಭಾಗವಹಿಸಿದ್ದರು.

ಅಜ್ಜಯ್ಯನ ಮೂರ್ತಿಯನ್ನು ನದಿ ದಡದಲ್ಲಿ ಇಟ್ಟು ತುಂಗಾಭದ್ರಾ ಆರತಿ ಮಾಡಿದ್ದು ವಿಶೇಷವಾಗಿತ್ತು. ಗದ್ದಿಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಎಸ್.ಸುರೇಶ್ ಸೇರಿದಂತೆ ಎಲ್ಲಾ ಟ್ರಸ್ಟಿಗಳು, ಗ್ರಾಮಸ್ಥರು ಹಾಜರಿದ್ದು, ಈ ಕಾರ್ಯಕ್ರಮ ನಡೆಸಿಕೊಟ್ಟರು. ಸೋಮವಾರ ಬೆಳಿಗ್ಗೆ 4.30ಕ್ಕೆ ಅಜ್ಜಯ್ಯನ ಗದ್ದಿಗೆಗೆ ಮಹಾ ರುದ್ರಾಭಿಷೇಕ, ಬೆಳಿಗ್ಗೆ 10 ಗಂಟೆಗೆ ರಾಜ್ಯಮಟ್ಟದ ಭಜನಾ ಸ್ಪರ್ಧೆಗೆ ಚಾಲನೆ, ನಂತರ 11 ಗಂಟೆಗೆ ಅಜ್ಜಯ್ಯನ ಬೆಳ್ಳಿ ರಥೋತ್ಸವ ನಡೆಯಲಿದೆ. ರಾತ್ರಿ 8 ಗಂಟೆಯಿಂದ ಕಾರ್ತಿಕೋತ್ಸವ ಜರುಗಲಿದೆ.


## ಹುಟ್ಟುಹಬ್ಬದ ಶುಭಾಶಯಗಳು



ಇಂದು ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ
ಶ್ರೀ ಪಾರ್ಶ್ವನಾಥ ಟೆಂಪಲ್ ಟ್ರಸ್ಟಿಗಳೂ, ಎಂಸಿಸಿ 'ಎ' ಬ್ಲಾಕ್‌ನ
ಶ್ರೀ ಸಾಯಿಬಾಬಾ ದೇವಸ್ಥಾನ ಟ್ರಸ್ಟಿಗಳೂ ಹಾಗೂ
ಶ್ರೀ ಮಹಾವೀರ ಯುವ ಮಂಚ್ (ರಿ)ನ ಅಧ್ಯಕ್ಷರೂ,
ಜೈನ್ ಶ್ರೀ ಕ್ಷೇತ್ರಪಾಲ್ ಸೌಹಾರ್ದ ಸಹಕಾರಿ ಸಂಘ ನಿಯಮಿತ
ನಿರ್ದೇಶಕರೂ ಆದ **ಜಿತೇಂದ್ರ ಕುಮಾರ ಬೇತೂರು**
ಇವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು...

**ಶುಭ ಕೋರುವವರು:**
ನವೀನ್ ಜೈನ್, ಮಂಜುನಾಥ್, ಶ್ರೀ ಕ್ಷೇತ್ರಪಾಲ್ ಚಿಟ್ಸ್ ಸಿಬ್ಬಂದಿ ವರ್ಗ
ಕೋಮಲ್ ಕುಂದಪ್ಪ, ಜೈನ್ ಪಾಲಿ ಫ್ಯಾಕ್ಸ್
ಅರ್ಚನಾ, ಮಹಾವೀರ್, ಲಕ್ಷ್ಮಿ
ಪ್ರಕಾಶ್ ಎಸ್.ಬಿ., ಶ್ರೀ ಭವಾನಿ ಮೆಡಿಕಲ್ಸ್, ಲೋಕಿಕೆರೆ.
ಜೈನ್ ಶ್ರೀ ಕ್ಷೇತ್ರಪಾಲ್ ಸೌಹಾರ್ದ ಸಹಕಾರಿ ಸಂಘ ನಿಯಮಿತದ ಸರ್ವ ನಿರ್ದೇಶಕರು


### ಈಶ್ವರ ದೇವಸ್ಥಾನದಲ್ಲಿ ಇಂದು ಕಾರ್ತಿಕೋತ್ಸವ

ದಾವಣಗೆರೆ ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ ರುವ ಈಶ್ವರ ವಿನಾಯಕ ಟ್ರಸ್ಟ್‌ನ 19ನೇ ವರ್ಷದ ಕಾರ್ತಿಕೋತ್ಸವದ ಪ್ರಯುಕ್ತ ಸಹಸ್ರ ದೀಪೋತ್ಸವ ಇಂದು ನಡೆಯಲಿದೆ. ಪ್ರಸಾದದ ವ್ಯವಸ್ಥೆ ಮಾಡಲಾಗಿದೆ.

### ದೇವರಹಟ್ಟಿಯಲ್ಲಿ ಇಂದು ಬಸವಣ್ಣ ಕಾರ್ತಿಕ



ದಾವಣಗೆರೆ ತಾಲ್ಲೂಕಿನ ದೇವರ ಹಟ್ಟಿ ಗ್ರಾಮದ ಶ್ರೀ ದೇವರಹಟ್ಟಿ ಬಸವಣ್ಣನ ದೇವಸ್ಥಾನದಲ್ಲಿ ಇಂದು ಕಾರ್ತಿಕೋತ್ಸವ ಏರ್ಪಡಿಸಲಾಗಿದ್ದು, ರಾತ್ರಿ 7 ರಿಂದ ವಿಶೇಷ ಪೂಜೆ, ಮಹಾಮಂಗಳಾರತಿ, ಫಳಾರ ವಿನಿಯೋಗ ನಡೆಯಲಿದೆ.

### ತಹಶೀಲ್ದಾರರಿಗೆ ಬೆದರಿಕೆ ಕರೆ, ಬಂಧನ



ನ್ಯಾಮತಿ, ಡಿ.17- ತಹಶೀಲ್ದಾರ್‌ಗೆ ಲೋಕಾಯುಕ್ತ ಹೆಸರಿನಲ್ಲಿ ಕರೆ ಮಾಡಿ ಬೆದರಿಕೆ ಹಾಕಿದ್ದ ಆರೋಪಿಯನ್ನು ಪತ್ತೆ ಹಚ್ಚುವಲ್ಲಿ ನ್ಯಾಮತಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಕಳೆದ ವಾರ ನ್ಯಾಮತಿ ತಾಲ್ಲೂಕು ತಹಶೀಲ್ದಾರ್ ಎಚ್. ಬಿ.ಗೋವಿಂದಪ್ಪನವರಿಗೆ ಲೋಕಾಯುಕ್ತ ಹೆಸರಿನಲ್ಲಿ ಕರೆ ಮಾಡಿ ಬೆದರಿಕೆ ಹಾಕಿದ್ದ ಆರೋಪಿಯನ್ನು ಮಹಾರಾಷ್ಟ್ರ ರಾಜ್ಯದ ಸಾಂಗ್ಲಿ ಜಿಲ್ಲೆ ಮೀರಜ್‌ನಲ್ಲಿ ಶುಕ್ರವಾರ ವಶಪಡಿಸಿಕೊಂಡು ನ್ಯಾಮತಿ ಪೊಲೀಸ್ ಠಾಣೆಗೆ ಕರೆತಂದು ವಿಚಾರಣೆಗೆ ಒಳಪಡಿಸಲಾಗಿದೆ.

ಬಂಧಿತ ಆರೋಪಿ ಬೆಳಗಾವಿ ಜಿಲ್ಲೆ ಚಿಕ್ಕೋಡಿಯ ಸದಲಗದವನಾಗಿರುವ ಮುರುಗೇಶ ಕುಂಬಾರ. ಈ ಹಿಂದೆ ಪೊಲೀಸ್ ಇಲಾಖೆಯಲ್ಲಿ ನೌಕರನಾಗಿ ಕರ್ತವ್ಯದಲಿದ್ದ ಎಂದು ಹೇಳಲಾಗಿದ್ದು, ವೃತ್ತಿಯಲ್ಲಿ ಕರ್ತವ್ಯ ಚ್ಯುತಿ ಆಪಾದನೆಯಿಂದ 2002ರಲ್ಲಿ ಸೇವೆಯಿಂದ ಅಮಾನತ್ತುಗೊಂಡಿದ್ದು, ರಾಜ್ಯದ ಹಲವು ಅಧಿಕಾರಿಗಳಿಗೆ ಬೆದರಿಕೆ ಕರೆ ಮಾಡುವುದನ್ನು ರೂಢಿಸಿಕೊಂಡಿದ್ದಾನೆ. ತನಿಖೆಯಿಂದ ಹೆಚ್ಚಿನ ಮಾಹಿತಿ ಪಡೆಯಬೇಕಾಗಿದೆ ಎಂದು ನ್ಯಾಮತಿ ಪೊಲೀಸ್ ಇನ್‌ಸ್ಪೆಕ್ಟರ್ ಎನ್.ಎಸ್.ರವಿ ತಿಳಿಸಿದರು.

ಪೊಲೀಸ್ ಇನ್‌ಸ್ಪೆಕ್ಟರ್ ಎನ್.ಎಸ್.ರವಿ ಮಾರ್ಗದರ್ಶನದಲ್ಲಿ ಸಬ್‌ಇನ್‌ಸ್ಪೆಕ್ಟರ್ ಬಿ.ಎಲ್.ಜಯಪ್ಪ ನಾಯ್ಕ, ಸಿಬ್ಬಂದಿ ಆನಂದ ಅವರು ಆರೋಪಿಯ ಮೊಬೈಲ್ ಕರೆಯ ಆಧಾರದ ಮೇಲೆ ಆರೋಪಿಯನ್ನು ಪತ್ತೆ ಹಚ್ಚಿ ಬಂಧಿಸಿದ್ದಾರೆ.

### ನಗರದಲ್ಲಿ ಇಂದು ನೀಲಕಂಠೇಶ್ವರ ಕಾರ್ತಿಕೋತ್ಸವ

ಕೆಟಿಜೆ ನಗರ 2ನೇ ಮೇನ್, 14ನೇ ಕ್ರಾಸ್‌ನಲ್ಲಿರುವ ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ಸಂಜೆ 7.15ಕ್ಕೆ ಶ್ರೀ ನೀಲಕಂಠೇಶ್ವರ ಸ್ವಾಮಿ ಕಾರ್ತಿಕ ದೀಪೋತ್ಸವ ಕಾರ್ಯಕ್ರಮ ನಡೆಯಲಿದೆ ಎಂದು ಕುರುಹಿನ ಶೆಟ್ಟಿ ನೇಕಾರ ಸಮಾಜ ಸಂಘದವರು ತಿಳಿಸಿದ್ದಾರೆ.

### ಅಂಚೆ ಕಚೇರಿ : ಬುಕ್ಕಿಂಗ್ ಅವಧಿ ವಿಸ್ತರಣೆ

ದಾವಣಗೆರೆ, ಡಿ.17- ನಗರದ ಪ್ರಧಾನ ಅಂಚೆ ಕಚೇರಿಯಲ್ಲಿ ರಿಜಿಸ್ಟರ್ಡ್, ಪಾರ್ಸೆಲ್, ಸ್ಪೀಡ್ ಪೋಸ್ಟ್‌ಗಳ ಬುಕ್ಕಿಂಗ್ ಅವಧಿಯನ್ನು ಸಂಜೆ 6.30 ರವರೆಗೆ ಹಾಗೂ ರೈಲ್ವೆ ನಿಲ್ದಾಣದ ಮುಂಭಾಗ ದಲ್ಲಿನ ಆರ್‌ಎಂಎಸ್ ಅಂಚೆ ಕಚೇರಿಯಲ್ಲಿ ರಿಜಿಸ್ಟರ್ಡ್ ಹಾಗೂ ಸ್ಪೀಡ್ ಪೋಸ್ಟ್‌ಗಳ ಬುಕ್ಕಿಂಗ್ ಅವಧಿಯನ್ನು ಸಂಜೆ 6 ರಿಂದ ರಾತ್ರಿ 11 ಗಂಟೆಯವರೆಗೆ ಸಾರ್ವಜನಿಕರ ಅನುಕೂಲಕ್ಕಾಗಿ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.


SSIMS SPARSH
CENTRE FOR ACCIDENTS BONE & JOINT CARE

**ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,**
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಕೀಲು ಮರುಜೋಡಣೆ
- ಮೊಣಕಾಲು ನೋವು
- ಹಿಪ್ ಮರುಜೋಡಣೆ
- ಭುಜದ ನೋವು
- ರಿವಿಷನ್ ಶಸ್ತ್ರಚಿಕಿತ್ಸೆ
- ಸ್ಪೋರ್ಟ್ಸ್ ಇಂಜುರೀಸ್
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 21 ಡಿಸೆಂಬರ್ 2023 । ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: **96869 29090 / 99800 33277**

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 17.12.2023ರಂದು ಅಕಾಲಿಕವಾಗಿ ನಮ್ಮನ್ನಗಲಿದ ಸ್ನೇಹಜೀವಿ
**ಶ್ರೀ ಜೆ.ಎಸ್. ಶಂಭುಲಿಂಗಪ್ಪ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಸರ್ವ ಸದಸ್ಯರು
**ಶ್ರೀ ಬಸವೇಶ್ವರ ಮತ್ತು ವೀರೇಶ್ವರ ದೇವಸ್ಥಾನ ಸಮಿತಿ**
ಬಸವರಾಜ ಪೇಟೆ, ದಾವಣಗೆರೆ.



CCH | SPARSH HOSPITAL THE TOUCH OF LIFE




**ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕ್**
ಹೃದಯ ವೈಫಲ್ಯ ಕ್ಲಿನಿಕ್
ಸ್ಪರ್ಶ್ ಆಸ್ಪತ್ರೆ – ಬೆಂಗಳೂರು
ಸಮಾಲೋಚನೆಗಾಗಿ ದಾವಣಗೆರೆಗೆ ಭೇಟಿ ನೀಡಲಿದ್ದಾರೆ

**ಡಾ॥ ಪಿ ಅಶೋಕ್ ಕುಮಾರ್**
MBBS, MD, DM, FSCAI Interventional Cardiology,
Advanced Heart Failure Management & Transplant Cardiology
**Consultant Cardiologist**

ಈ ಕೆಳಕಂಡ ತೊಂದರೆಗಳಿಗೆ ಸಲಹೆ ನೀಡಲಾಗುವುದು
ಹೃದಯ ಲಯದ ತೊಂದರೆಗಳು (Arrhythmias) । ನೀವು ಜನಿಸುವಾಗ ಕಂಡು ಬಂದ ಹೃದಯ ದೋಷಗಳು (Congenital Heart Defects) ಹೃದಯ ಕವಾಟದ ಕಾಯಿಲೆ । ಹೃದಯ ಸ್ನಾಯುವಿನ ಕಾಯಿಲೆ । ಹೃದಯದ ಸೋಂಕು । ಎದೆ ನೋವು, ಎದೆಯ ಬಿಗಿತ, ಎದೆಯ ಒತ್ತಡ ಮತ್ತು ಎದೆಯ ಅಸ್ವಸ್ಥತೆ (Angina) । ಆಯಾಸ । ಒತ್ತಡ । ಪಾದದ ಊತ । ಉಸಿರಾಟ ತೊಂದರೆ

ನೋಂದಣಿಗಾಗಿ ಕರೆಮಾಡಿ: **97316 41986 | 99800 33277**

ಸೂಚನೆ: ವೈದ್ಯರು ಪ್ರತೀ ತಿಂಗಳ ಎರಡನೇ ಬುಧವಾರ ತಪಾಸಣೆಗೆ ಲಭ್ಯರಿರುತ್ತಾರೆ
ದಿನಾಂಕ: ಬುಧವಾರ, 20ನೇ ಡಿಸೆಂಬರ್ 2023 | ಸಮಯ: ಬೆಳಿಗ್ಗೆ 10:00 ರಿಂದ ಮಧ್ಯಾಹ್ನ 1:00 ರವರೆಗೆ

ಸ್ಥಳ: **ಸಿಟಿ ಸೆಂಟ್ರಲ್ ಆಸ್ಪತ್ರೆ**
ಅಕ್ಕಮಹಾದೇವಿ ರಸ್ತೆ, 17, AVK ಕಾಲೇಜು ರಸ್ತೆ, ಪಿ ಜೆ ಎಕ್ಸಟೆನ್ಶನ್, ದಾವಣಗೆರೆ – 577 002